# ಅಧ್ಯಾಯ-V
# ಮೋಟಾರು ವಾಹನಗಳ ಮೇಲಿನ ತೆರಿಗೆಗಳು

## 5.1 ತೆರಿಗೆ ನಿರ್ವಹಣೆ

ಕರ್ನಾಟಕ ಮೋಟಾರು ವಾಹನಗಳ ಮೇಲಿನ ತೆರಿಗೆ ಅಧಿನಿಯಮ, 1957ರ ಅನುವುಗಳು ಹಾಗೂ ಅದರ ಅಡಿಯಲ್ಲಿ ರೂಪಿಸಿರುವ ನಿಯಮಗಳು ಮೋಟಾರು ವಾಹನಗಳ ಮೇಲಿನ ತೆರಿಗೆಯನ್ನು ವಿಧಿಸುವಿಕೆ ಹಾಗೂ ಸಂಗ್ರಹಣೆ/ವಸೂಲಾತಿಯನ್ನು ನಿಯಂತ್ರಿಸುತ್ತವೆ. ಮೋಟಾರು ವಾಹನಗಳ ಮೇಲಿನ ತೆರಿಗೆಯ ವಿಧಿಸುವಿಕೆಯನ್ನು ಸಾರಿಗೆಯ ಜಂಟಿ ಆಯುಕ್ತರುಗಳ ಸಹಾಯದಿಂದ ಕಾರ್ಯನಿರ್ವಹಿಸುವ ಸಾರಿಗೆ ಮತ್ತು ರಸ್ತೆ ಸುರಕ್ಷತೆಯ ಆಯುಕ್ತರ ನೇತೃತ್ವದಲ್ಲಿರುವ ಸಾರಿಗೆ ಇಲಾಖೆಯು ನಿಯಂತ್ರಿಸುತ್ತದೆ. ರಾಜ್ಯದಲ್ಲಿ 59 ಪ್ರಾದೇಶಿಕ ಸಾರಿಗೆ ಕಚೇರಿಗಳು/ಸಹಾಯಕ ಪ್ರಾದೇಶಿಕ ಸಾರಿಗೆ ಕಚೇರಿಗಳು ಹಾಗೂ 15 ತನಿಖಾ ಠಾಣೆಗಳು ಇವೆ.

## 5.2 ಆಂತರಿಕ ಲೆಕ್ಕಪರಿಶೋಧನೆ

ಸಾರಿಗೆ ಇಲಾಖೆಯಲ್ಲಿ 1960 ರಿಂದಲೂ ಆಂತರಿಕ ಲೆಕ್ಕಪರಿಶೋಧನಾ ವಿಭಾಗವು ಕಾರ್ಯನಿರ್ವಹಿಸುತ್ತಿದೆ. ಇಲಾಖೆಯು ಒದಗಿಸಿದ ಮಾಹಿತಿಯಂತೆ, 2014–15 ರಲ್ಲಿ ಲೆಕ್ಕಪರಿಶೋಧನೆಗೆ ಒಳಪಡಿಸಲು 74 ಕಚೇರಿಗಳನ್ನು ಗುರುತಿಸಲಾಯಿತಾದರೂ ಸಿಬ್ಬಂದಿಯ ಕೊರತೆಯ ಕಾರಣ ಯಾವುದೇ ಕಚೇರಿಯನ್ನೂ ಲೆಕ್ಕಪರಿಶೋಧನೆಗೆ ಒಳಪಡಿಸಿರಲಿಲ್ಲ.

## 5.3 ಲೆಕ್ಕಪರಿಶೋಧನೆಯ ಫಲಿತಾಂಶಗಳು

2014–15 ಸಾಲಿನಲ್ಲಿ ನಡೆಸಲಾದಂತಹ ಸಾರಿಗೆ ಇಲಾಖೆಯ 52 ಕಚೇರಿಗಳ ದಾಖಲೆಗಳ ಪರೀಕ್ಷಾ–ಪರಿಶೀಲನೆಯು 82 ಪ್ರಕರಣಗಳಲ್ಲಿ ₹ 309.81 ಕೋಟಿ ಮೊತ್ತದಷ್ಟು ತೆರಿಗೆಯನ್ನು ಕಡಿಮೆ ಪ್ರಮಾಣದಲ್ಲಿ ನಿರ್ಧಾರಣೆ ಮಾಡಿದ್ದುದು ಹಾಗೂ ಇನ್ನಿತರೆ ನಿಯಮಬಾಹಿರತೆಗಳನ್ನು ತೋರಿಸಿಕೊಟ್ಟಿತು, ಅವುಗಳು ಕೋಷ್ಟಕ 5.1ರಲ್ಲಿ ನೀಡಲಾಗಿರುವ ಪ್ರವರ್ಗಗಳ ಅಡಿಯಲ್ಲಿ ಬರುತ್ತವೆ.

**ಕೋಷ್ಟಕ 5.1**
**ಲೆಕ್ಕಪರಿಶೋಧನೆಯ ಫಲಿತಾಂಶಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ಪ್ರವರ್ಗ | ಕಂಡಿಕೆಗಳ ಸಂಖ್ಯೆ | ಮೊತ್ತ |
|---|---|---|---|
| 1. | ಮೋಟಾರು ವಾಹನಗಳ ಮೇಲಿನ ತೆರಿಗೆಯನ್ನು ವಿಧಿಸುವಿಕೆ ಹಾಗೂ ಸಂಗ್ರಹಣೆಯ ಮೇಲೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿ | 1 | 302.19 |
| 2. | ನಿರ್ಮಾಣ ಉಪಕರಣ ವಾಹನಗಳ ಮೇಲೆ ಜೀವಿತಾವಧಿ ತೆರಿಗೆಯನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು. | 22 | 1.91 |
| 3. | ಸಾರಿಗೆಯೇತರ ವಾಹನಗಳ ಮೇಲೆ ಜೀವಿತಾವಧಿ ತೆರಿಗೆಯನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು. | 13 | 0.11 |
| 4 | ತ್ರೈಮಾಸಿಕ ತೆರಿಗೆಯನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು. | 24 | 2.12 |
| 5. | ಇತರೆ ನಿಯಮಬಾಹಿರತೆಗಳು | 23 | 3.48 |
| | **ಒಟ್ಟು** | **83** | **309.81** |

ಪ್ರಸಕ್ತ ಸಾಲಿನಲ್ಲಿ ಇಲಾಖೆಯು 58 ಪ್ರಕರಣಗಳಲ್ಲಿ ₹ 3.02 ಕೋಟಿ ಮೊತ್ತವು ಒಳಗೊಂಡಂತೆ ನಿರ್ಧಾರಣೆಗಳನ್ನು ಕಡಿಮೆ ಪ್ರಮಾಣದಲ್ಲಿ ಮಾಡಿದ್ದುದು ಹಾಗೂ ಇನ್ನಿತರೆ ನಿಯಮಬಾಹಿರತೆಗಳನ್ನು ಒಪ್ಪಿಕೊಂಡಿತು. ಹಿಂದಿನ ಸಾಲುಗಳಲ್ಲಿ ಸ್ಪಷ್ಟಪಡಿಸಲಾಗಿದ್ದಂತಹ ಪ್ರಕರಣಗಳಿಗೆ ಸಂಬಂಧಿಸಿದಂತೆ ಇಲಾಖೆಯು 2014–15 ಸಾಲಿನಲ್ಲಿ 72 ಪ್ರಕರಣಗಳಲ್ಲಿ ₹ 4.06 ಕೋಟಿ ಮೊತ್ತವನ್ನೂ ಸಹ ವಸೂಲಾತಿ ಮಾಡಿದ್ದಿತು.

₹ 302.19 ಕೋಟಿ ಮೊತ್ತವು ಒಳಗೊಂಡಂತೆ ಮೋಟಾರು ವಾಹನಗಳ ಮೇಲಿನ ತೆರಿಗೆಯನ್ನು ವಿಧಿಸುವಿಕೆ ಹಾಗೂ ಸಂಗ್ರಹಣೆಯ ಮೇಲಿನ ಒಂದು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ ಹಾಗೂ ಅನುಸರಣಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ₹ 1.32 ಕೋಟಿ ಮೊತ್ತವು ಒಳಗೊಂಡ ಕೆಲವು ದೃಷ್ಟಾಂತ ಪ್ರಕರಣಗಳನ್ನು ಮುಂದಿನ ಕಂಡಿಕೆಗಳಲ್ಲಿ ತಿಳಿಸಲಾಗಿದೆ.

## 5.4 ಮೋಟಾರು ವಾಹನಗಳ ಮೇಲಿನ ತೆರಿಗೆಯನ್ನು ವಿಧಿಸುವಿಕೆ ಹಾಗೂ ಸಂಗ್ರಹಣೆಯ ಮೇಲೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿ

### ಮುಖ್ಯಾಂಶಗಳು

ನಿಯಂತ್ರಣ ಕೊರತೆಗಳು, 4,281 ಸಾಗಾಣಿಕೆ ವಾಹನಗಳು ನಿಯಂತ್ರಣ ವ್ಯಾಪ್ತಿಗಳ ನಡುವೆ ಅವುಗಳ ವಲಸೆ ಹೋಗುವಿಕೆ/ಸ್ಥಳಾಂತರಣದ ಸಮಯದಲ್ಲಿ ₹ 13.17 ಕೋಟಿ ಮೊತ್ತದಷ್ಟು ರಾಜಸ್ವ ನಷ್ಟದೊಂದಿಗೆ ತೆರಿಗೆ ಜಾಲದಿಂದ ತಪ್ಪಿಸಿಕೊಳ್ಳುವಲ್ಲಿ ಪರಿಣಮಿಸಿದವು.

**(ಕಂಡಿಕೆ 5.4.2.1)**

ಕೇವಲ ಶೇಕಡಾ 21.01ರಷ್ಟು ಸಾಗಾಣಿಕೆ ವಾಹನಗಳು ಹಾಗೂ ಶೇಕಡಾ 19.38ರಷ್ಟು ಸಾಗಾಣಿಕೆಯೇತರ ವಾಹನಗಳು ಮಾತ್ರ ನಿಯತಕಾಲಿಕ ಸುಸ್ಥಿತಿ ಪರೀಕ್ಷಣೆ ಹಾಗೂ ಪ್ರಮಾಣೀಕರಣವನ್ನು ಅನುಸರಿಸಿದ್ದವು. ಇತರೆ ವಾಹನಗಳಿಗೆ ಸಂಬಂಧಿಸಿದಂತೆ ಈ ನಿಟ್ಟಿನಲ್ಲಿ ಅನುಸರಣೆಯನ್ನು ಖಚಿತಪಡಿಸಿಕೊಳ್ಳುವಲ್ಲಿನ ವಿಫಲತೆಯು ಏಪ್ರಿಲ್ 2010 ಹಾಗೂ ಮಾರ್ಚ್ 2015ರ ನಡುವಿನ ಅವಧಿಯಲ್ಲಿ ಸರ್ಕಾರಕ್ಕೆ ₹ 74.07 ಕೋಟಿ ಮೊತ್ತದಷ್ಟು ರಾಜಸ್ವ/ವರಮಾನವನ್ನು ವಂಚಿಸುವಲ್ಲಿನ ಹೆಚ್ಚುವರಿ ಪರಿಣಾಮವನ್ನು ಹೊಂದಿದ್ದಿತು.

**(ಕಂಡಿಕೆ 5.4.2.2)**

68,653 ಸಾಗಾಣಿಕೆ ವಾಹನಗಳಿಂದ ಬರಬೇಕಾಗಿದ್ದಂತಹ ₹ 141.65 ಕೋಟಿ ಮೊತ್ತದಷ್ಟು ರಾಜಸ್ವ/ವರಮಾನ ಬಾಕಿಗಳನ್ನು ತಗಾದೆ ವಸೂಲಾತಿ ಹಾಗೂ ಬಾಕಿ ವಹಿಯಲ್ಲಿ ದಾಖಲಿಸಿರಲಿಲ್ಲ ಹಾಗೂ ಇಲಾಖೆಯು ಅವುಗಳ ವಸೂಲಾತಿಗಾಗಿ ಅನುಸರಣಾ ಕ್ರಮಗಳನ್ನು ಕೈಗೊಂಡಿರಲಿಲ್ಲ.

**(ಕಂಡಿಕೆ 5.4.3.1)**

ತ್ರೈಮಾಸಿಕ ತೆರಿಗೆ ಸಂಗ್ರಹಣೆಗೆ ಸಂಬಂಧಿಸಿದಂತೆ ಸಮರ್ಪಕ ನಿಯಂತ್ರಣಗಳ ಕೊರತೆಯು 22,002 ಸಾಗಾಣಿಕೆ ವಾಹನಗಳು ಒಂದರಿಂದ 16 ತ್ರೈಮಾಸಿಕಗಳವರೆಗೂ ತೆರಿಗೆ ಪಾವತಿಯಿಂದ ತಪ್ಪಿಸಿಕೊಳ್ಳುವಲ್ಲಿಗೆ ದಾರಿ ಮಾಡಿಕೊಟ್ಟಿದ್ದಿತು ಹಾಗೂ ಇದು ₹ 45.31 ಕೋಟಿ ಮೊತ್ತದಷ್ಟು ತ್ರೈಮಾಸಿಕ ತೆರಿಗೆಯು ವಸೂಲಾತಿಯಾಗದಿರುವಲ್ಲಿ ಪರಿಣಮಿಸಿದ್ದಿತು.

**(ಕಂಡಿಕೆ 5.4.3.2)**

ಬ್ಯಾಟರಿಯಿಂದ ಚಲಿಸುವ ವಾಹನಗಳು ಹಾಗೂ ನಿರ್ಮಾಣ ಉಪಕರಣ ವಾಹನಗಳಿಂದ ಜೀವಿತಾವಧಿ ತೆರಿಗೆ ಸಂಗ್ರಹಣೆಗೆ ಸಂಬಂಧಿಸಿದಂತೆ ಸಮರ್ಪಕ ನಿಯಂತ್ರಣಗಳ ಕೊರತೆಯು ₹ 4.61 ಕೋಟಿ ಮೊತ್ತದಷ್ಟು ರಾಜಸ್ವ/ವರಮಾನ ಬಾಕಿಗಳನ್ನು ಗುರುತಿಸುವಲ್ಲಿನ ವಿಫಲತೆಯಲ್ಲಿ ಪರಿಣಮಿಸಿತು.

**(ಕಂಡಿಕೆ 5.4.4)**

4,02,666 ಸಾಗಾಣಿಕೆ ವಾಹನಗಳಿಂದ ₹ 23.52 ಕೋಟಿ ಮೊತ್ತದಷ್ಟು ಹಾಗೂ 9,69,706 ಸಾಗಾಣಿಕೆಯೇತರ ವಾಹನಗಳಿಂದ ₹ 29.01 ಕೋಟಿ ಮೊತ್ತದಷ್ಟು ಹಸಿರು ತೆರಿಗೆಯನ್ನು ವಸೂಲಾತಿ ಮಾಡಿರಲಿಲ್ಲ.

**(ಕಂಡಿಕೆ 5.4.5)**

## 5.4.1 ಪೀಠಿಕೆ

ಮೋಟಾರು ವಾಹನಗಳ ಮೇಲಿನ ತೆರಿಗೆಯ ವಿಧಿಸುವಿಕೆ ಮತ್ತು ಸಂಗ್ರಹಣೆ/ವಸೂಲಾತಿಯು ಮೋಟಾರು ವಾಹನಗಳ ಮೇಲಿನ ತೆರಿಗೆ ಅಧಿನಿಯಮ, 1988, ಕೇಂದ್ರ ಮೋಟಾರು ವಾಹನಗಳ ಮೇಲಿನ ತೆರಿಗೆ ನಿಯಮಗಳು, 1989, ಕರ್ನಾಟಕ ಮೋಟಾರು ವಾಹನಗಳ ಮೇಲಿನ ತೆರಿಗೆ ನಿಯಮಗಳು, 1989 ಹಾಗೂ ಕರ್ನಾಟಕ ಮೋಟಾರು ವಾಹನಗಳ ಮೇಲಿನ ತೆರಿಗೆ ಅಧಿನಿಯಮ, 1957 ಹಾಗೂ ಅವುಗಳ ಅಡಿಯಲ್ಲಿ ರೂಪಿಸಿರುವ ನಿಯಮಗಳಿಂದ ನಿಯಂತ್ರಿಸಲ್ಪಡುತ್ತದೆ. ಸಾರಿಗೆ ಇಲಾಖೆಯು ಪ್ರಮುಖವಾಗಿ ರಾಜ್ಯದಲ್ಲಿ ಮೋಟಾರು ವಾಹನಗಳ ಬಳಕೆಯ ನಿಯಂತ್ರಣ ಹಾಗೂ ಈ ಅಧಿನಿಯಮಗಳು ಹಾಗೂ ನಿಯಮಗಳ ಅನುವುಗಳ ಅನುಸಾರ ಮೋಟಾರು ವಾಹನಗಳ ಮೇಲಿನ ತೆರಿಗೆಯನ್ನು ವಸೂಲಾತಿ ಮಾಡುವಲ್ಲಿಗೆ ಸಂಬಂಧಿಸಿದೆ.

ನಿಯಂತ್ರಣಗಳು, ರಾಜ್ಯದಲ್ಲಿ ಚಲಿಸುತ್ತಿರುವ ಎಲ್ಲಾ ಸಾಗಾಣಿಕೆ ಅಥವಾ ಸಾಗಾಣಿಕೆಯೇತರ ವಾಹನಗಳು ಇಲಾಖೆಯಲ್ಲಿ ನೋಂದಣಿ ಮಾಡಿಸಿಕೊಂಡಿರುವವು ಹಾಗೂ ತ್ರೈಮಾಸಿಕ ತೆರಿಗೆಯನ್ನು ನಿಯತಕಾಲಿಕವಾಗಿ ಪಾವತಿಸುತ್ತಿರುವವು ಅಥವಾ ಜೀವಿತಾವಧಿ ತೆರಿಗೆಯನ್ನು ಪಾವತಿಸಿರುವವು ಎಂಬುದನ್ನು ಖಚಿತಪಡಿಸಿಕೊಳ್ಳುವ ಗುರಿಯನ್ನು ಹೊಂದಿವೆ. ಇಲಾಖೆಯ ನಿಯಂತ್ರಣ ಕಾರ್ಯಚಟುವಟಿಕೆಗಳು ಬಳಕೆಯಲ್ಲಿರುವ ಎಲ್ಲಾ ಸಾಗಾಣಿಕೆ ವಾಹನಗಳಿಗೆ ಪರವಾನಿಗೆಗಳನ್ನು ಹಾಗೂ ಸುಸ್ಥಿತಿ ಪ್ರಮಾಣ ಪತ್ರಗಳನ್ನು ನೀಡಲಾಗಿದೆ ಹಾಗೂ ನಿಯತಕಾಲಿಕವಾಗಿ ನವೀಕರಿಸಿಕೊಳ್ಳಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದನ್ನೂ ಒಳಗೊಂಡಿವೆನೋಂದಣಿ ಪ್ರಮಾಣ ಪತ್ರಗಳನ್ನು ನೀಡುವ ಮೂಲಕ ಹಾಗೂ ಅವುಗಳನ್ನು ಮುಂದಕ್ಕೆ ನವೀಕರಿಸುವ ಮೂಲಕ ಅವುಗಳು ರಸ್ತೆಯಲ್ಲಿ ಬಳಕೆಯಾಗಲು ಸುಸ್ಥಿರವಾಗಿರುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಸಾಗಾಣಿಕೆಯೇತರ ವಾಹನಗಳ ಸುಸ್ಥಿತಿಯನ್ನು ಪರಿಶೀಲಿಸುವ ಅಗತ್ಯತೆಯನ್ನು ಇಲಾಖೆಯು ಹೊಂದಿದೆ. ಕರ್ನಾಟಕ ಮೋಟಾರು ವಾಹನಗಳ ಮೇಲಿನ ತೆರಿಗೆ ಅಧಿನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಿರುವಂತೆ, ಇತರೆ ರಾಜ್ಯಗಳಲ್ಲಿ ನೋಂದಣಿ ಮಾಡಿಸಿಕೊಂಡಿರುವ, ಆದರೆ ರಾಜ್ಯದ ಒಳಗಡೆ ಓಡಾಡುತ್ತಿರುವ/ಚಲಿಸುತ್ತಿರುವ ವಾಹನಗಳಿಂದ ತೆರಿಗೆಯ ವಸೂಲಾತಿಯನ್ನೂ ಸಹ ಇಲಾಖೆಯು ಖಚಿತಪಡಿಸಿಕೊಳ್ಳತಕ್ಕದ್ದು.

ವಾಹನಗಳ ನೋಂದಣಿ, ತೆರಿಗೆ, ಶುಲ್ಕ, ದಂಡ, ಇತ್ಯಾದಿಗಳ ವಸೂಲಾತಿ, ಪರವಾನಿಗೆಗಳನ್ನು ಹಾಗೂ ಸುಸ್ಥಿತಿ ಪ್ರಮಾಣ ಪತ್ರಗಳನ್ನು ನೀಡುವುದು ಹಾಗೂ ನವೀಕರಿಸುವುದನ್ನು ರಾಷ್ಟ್ರೀಯ ಮಾಹಿತಿ ಕೇಂದ್ರದಿಂದ (NIC) ಅಭಿವೃದ್ಧಿಪಡಿಸಲ್ಪಟ್ಟಿರುವ ಹಾಗೂ ವಾಹನ (VAHAN) ಎಂಬುದಾಗಿ ಕರೆಯಲ್ಪಡುವ ತಂತ್ರಾಂಶ ಅನ್ವಯವನ್ನು ಬಳಸಿಕೊಂಡು ಗಣಕೀಕರಣಗೊಳಿಸಲಾಗಿದೆ.

'ಸಾರಿಗೆ ಇಲಾಖೆಯ ಗಣಕೀಕರಣದ ಮೇಲೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ'ಯ ಶೀರ್ಷಿಕೆಯ ಅಡಿಯಲ್ಲಿ ಮೇಲೆ ತಿಳಿಸಲಾದಂತಹ ತಂತ್ರಾಂಶದ ಮೇಲೆ ಒಂದು ಮಾಹಿತಿ ವ್ಯವಸ್ಥೆ ಲೆಕ್ಕಪರಿಶೋಧನೆಯನ್ನು ನಡೆಸಲಾಗಿದ್ದಿತು. ಇದನ್ನು 2010–11 ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ವರದಿ ಮಾಡಲಾಗಿದ್ದಿತು (ಕಂಡಿಕೆ ಸಂಖ್ಯೆ 4.7).

### 5.4.1.1 ಸಾಂಸ್ಥಿಕ ರಚನೆ

ಇಲಾಖೆಯು ಸಾರಿಗೆ ಹಾಗೂ ರಸ್ತೆ ಸುರಕ್ಷತೆಯ ಆಯುಕ್ತರವರ ನೇತೃತ್ವದಲ್ಲಿದೆ ಹಾಗೂ ಕರ್ನಾಟಕ ಸರ್ಕಾರದ ಸಾರಿಗೆ ಇಲಾಖೆಯ ಹೆಚ್ಚುವರಿ (ಅಡಿಷನಲ್) ಮುಖ್ಯ ಕಾರ್ಯದರ್ಶಿಯವರ ಆಡಳಿತಾತ್ಮಕ ನಿಯಂತ್ರಣದ ಅಡಿಯಲ್ಲಿದೆ. ಅವರು ಆಡಳಿತ, ಜಾರಿ ದಕ್ಷಿಣ ವಿಭಾಗ, ಜಾರಿ ಉತ್ತರ ವಿಭಾಗ ಹಾಗೂ ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರ, ಹೀಗೆ ಪ್ರತಿಯೊಂದಕ್ಕೂ ಒಬ್ಬರಂತೆ ನಾಲ್ಕು ಹೆಚ್ಚುವರಿ ಆಯುಕ್ತರುಗಳು, ಒಬ್ಬರು ಜಂಟಿ ಆಯುಕ್ತರು ಹಾಗೂ ಒಬ್ಬರು ಕೇಂದ್ರ ಕಚೇರಿಯಲ್ಲಿ ಸಂಖ್ಯಾಶಾಸ್ತ್ರಗಳಿಗೆ ಸಂಬಂಧಿತ ಸಹಾಯಕ ನಿರ್ದೇಶಕರ ಸಹಾಯದಿಂದ ಕಾರ್ಯನಿರ್ವಹಿಸುತ್ತಾರೆ. ರಾಜ್ಯದಲ್ಲಿ, ಪ್ರತಿಯೊಂದು ವಿಭಾಗವೂ ಓರ್ವ ಜಂಟಿ ಆಯುಕ್ತರವರ ನೇತೃತ್ವದಲ್ಲಿರುವ ಆರು ಸಾರಿಗೆ ವಿಭಾಗಗಳಿವೆ. ವಿಭಾಗಗಳ ಅಡಿಯಲ್ಲಿ, ಸಾರಿಗೆ ಉಪ–ಆಯುಕ್ತರುಗಳು/ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು/ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ನೇತೃತ್ವದಲ್ಲಿರುವ 59 ಪ್ರಾದೇಶಿಕ ಸಾರಿಗೆ ಕಚೇರಿಗಳು/ಸಹಾಯಕ ಪ್ರಾದೇಶಿಕ ಸಾರಿಗೆ ಕಚೇರಿಗಳು ಕಾರ್ಯನಿರ್ವಹಿಸುತ್ತಿವೆ. 59 ಕ್ಷೇತ್ರ ಕಚೇರಿಗಳ (ಪ್ರಾದೇಶಿಕ ಸಾರಿಗೆ ಕಚೇರಿಗಳು/ಸಹಾಯಕ ಸಾರಿಗೆ ಕಚೇರಿಗಳು) ಪೈಕಿ ಬೆಂಗಳೂರಿನಲ್ಲಿರುವ ಒಂದು ಪ್ರಾದೇಶಿಕ ಸಾರಿಗೆ ಕಚೇರಿಯು ಪ್ರತ್ಯೇಕವಾಗಿ ಆಟೋರಿಕ್ಷಾಗಳಿಗೆ ಅನುಮತಿಗಳನ್ನು ನೀಡುವ ಹಾಗೂ ಸಾರಿಗೆ ವಲಯದಲ್ಲಿನ ಸಾರ್ವಜನಿಕ ವಲಯದ ಉದ್ದಿಮೆಗಳಿಗೆ ಸಂಬಂಧಿತ ವಿಷಯಗಳನ್ನು ವ್ಯವಹರಿಸುತ್ತದೆ.

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಹಾಗೂ ಸಹಾಯಕ ಸಾರಿಗೆ ಅಧಿಕಾರಿಗಳು ವ್ಯವಸ್ಥಾಪಕರು, ಮೋಟಾರು ವಾಹನಗಳ ಪರೀಕ್ಷಕರು ಹಾಗೂ ಇತರೆ ಆಡಳಿತಾತ್ಮಕ ಹಾಗೂ ಗುಮಾಸ್ತರುಗಳ ಸಹಾಯದಿಂದ ಕಾರ್ಯನಿರ್ವಹಿಸುತ್ತಾರೆ.

ಅಲ್ಲದೇ, ವಾಹನಗಳ ಅಂತರ–ರಾಜ್ಯ ಚಲನೆಗಳನ್ನು ಮೇಲ್ವಿಚಾರಣೆ ಮಾಡುವ ಸಲುವಾಗಿ ಹಾಗೂ ಇತರೆ ರಾಜ್ಯಗಳಲ್ಲಿ ನೋಂದಣಿ ಮಾಡಿಸಲ್ಪಟ್ಟಂತಹ, ಆದರೆ ರಾಜ್ಯದಲ್ಲಿ ಓಡಾಡುತ್ತಿರುವ ವಾಹನಗಳಿಂದ ತೆರಿಗೆಯನ್ನು ವಸೂಲಾತಿ ಮಾಡುವುದಕ್ಕಾಗಿ ಇಲಾಖೆಯು ರಾಜ್ಯದ ಸೀಮೆಗಳಲ್ಲಿ 15 ತನಿಖಾ ಠಾಣೆಗಳನ್ನು ಸ್ಥಾಪಿಸಿದೆ.

## 5.4.1.2 ಲೆಕ್ಕಪರಿಶೋಧನೆಯ ಉದ್ದೇಶಗಳು

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಉದ್ದೇಶಗಳು ಈ ಕೆಳಗಿನವುಗಳನ್ನು ಖಚಿತಪಡಿಸಿಕೊಳ್ಳುವುದಾಗಿದ್ದಿತು:

1. ಇಲಾಖೆಯಲ್ಲಿ ಇರುವಂತಹ ವ್ಯವಸ್ಥೆಯು ಅಂತರ–ರಾಜ್ಯ ವಾಹನಗಳೂ ಸೇರಿದಂತೆ ರಾಜ್ಯದಲ್ಲಿ ಓಡಾಡುತ್ತಿರುವ ಎಲ್ಲಾ ವಾಹನಗಳ ನೋಂದಣಿ ಹಾಗೂ ಅವುಗಳಿಂದ ನಿಯಮಗಳ ಪಾಲನೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವಲ್ಲಿ ಇಲಾಖೆಯಲ್ಲಿ ಇರುವಂತಹ ವ್ಯವಸ್ಥೆಯು ಸಮರ್ಪಕವಾಗಿರುವುದೆ; ಹಾಗೂ

2. ತೆರಿಗೆ, ಶುಲ್ಕ ಹಾಗೂ ದಂಡಗಳನ್ನು ವಿಧಿಸುವಿಕೆ ಮತ್ತು ವಸೂಲಾತಿಯ ವ್ಯವಸ್ಥೆಯು ಪರಿಣಾಮಕಾರಿತ್ವದಿಂದ ಕೂಡಿರುವುದೆ ಹಾಗೂ ಕರ್ನಾಟಕ ಮೋಟಾರು ವಾಹನಗಳ ಮೇಲಿನ ತೆರಿಗೆ ಅಧಿನಿಯಮದ ಅನುವುಗಳನ್ನು ಅನುಸರಿಸಲು ಸಮರ್ಪಕವಾಗಿರುವುದೆ.

## 5.4.1.3 ಲೆಕ್ಕಪರಿಶೋಧನೆಯ ಮಾನದಂಡ

ಈ ಕೆಳಗಿನವುಗಳನ್ನು ಮಾನದಂಡಗಳ ಮೂಲಗಳನ್ನಾಗಿ ಬಳಸಿಕೊಳ್ಳಲಾಗಿದ್ದಿತು:

1. ಮೋಟಾರು ವಾಹನಗಳ ಅಧಿನಿಯಮ, 1988
2. ಕೇಂದ್ರ ಮೋಟಾರು ವಾಹನಗಳ ನಿಯಮಗಳು, 1989
3. ಕರ್ನಾಟಕ ಮೋಟಾರು ವಾಹನಗಳ ನಿಯಮಗಳು, 1989
4. ಕರ್ನಾಟಕ ಮೋಟಾರು ವಾಹನಗಳ ಮೇಲಿನ ತೆರಿಗೆ ಅಧಿನಿಯಮ, 1957
5. ಕರ್ನಾಟಕ ಮೋಟಾರು ವಾಹನಗಳ ಮೇಲಿನ ತೆರಿಗೆ ನಿಯಮಗಳು, 1957

## 5.4.1.4 ವ್ಯಾಪನೆ

ಲೆಕ್ಕಪರಿಶೋಧನೆಯ ಅವಧಿಯು 2010–11ರಿಂದ 2014–15ರವರೆಗಿನ ಐದು ವರ್ಷಗಳಾಗಿದ್ದಿತು. ರಾಜ್ಯದಲ್ಲಿ ಓಡಾಡುತ್ತಿರುವ ವಾಹನಗಳ ನೋಂದಣಿ ಮತ್ತು ನಿಯಂತ್ರಣಕ್ಕೆ ಇಲಾಖೆಯಲ್ಲಿನ ವ್ಯವಸ್ಥೆಗಳು ಮತ್ತು ನಿಯಂತ್ರಣಗಳ ಸಮರ್ಪಕತೆ, ತೆರಿಗೆ, ಶುಲ್ಕ, ಜುಲ್ಮಾನೆ ಹಾಗೂ ದಂಡಗಳನ್ನು ವಿಧಿಸುವಲ್ಲಿ ಹಾಗು ಸಂಗ್ರಹಿಸುವಲ್ಲಿನ ದಕ್ಷತೆ, ಇವುಗಳನ್ನು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯಲ್ಲಿ ವಿಶ್ಲೇಷಿಸಲಾಯಿತು.

ಮಾದರಿ ಆಯ್ಕೆ ಪದ್ಧತಿಯ ಮೂಲಕ ಆಂಗ್ಲ ಭಾಷೆಯ ವರ್ಣಾನುಕ್ರಮದಲ್ಲಿ ಪ್ರಾದೇಶಿಕ ಸಾರಿಗೆ ಕಚೇರಿಗಳು/ಉಪ–ಪ್ರಾದೇಶಿಕ ಸಾರಿಗೆ ಕಚೇರಿಗಳ ಪಟ್ಟಿಯಲ್ಲಿ ಕ್ರಮಾಂಕಗಳನ್ನು ನಿರ್ಧರಿಸುವುದರ ಜೊತೆಗೆ (ಸೀಡಿಂಗ್) ಅಂತರ–ಸಕ್ರಿಯ ದತ್ತ ಹೊರತೆಗೆಯುವಿಕೆ ಹಾಗೂ ವಿಶ್ಲೇಷಣಾ (ಐಡಿಇಎ) ತಂತ್ರಾಂಶವನ್ನು ಬಳಸಿಕೊಳ್ಳುವ ಮೂಲಕ ಐವತ್ತೊಂಬತ್ತು ಪ್ರಾದೇಶಿಕ ಸಾರಿಗೆ ಕಚೇರಿಗಳು/ಉಪಸಾರಿಗೆ ಕಚೇರಿಗಳ ಪೈಕಿ ಇಪ್ಪತ್ತನ್ನು[1] ಸವಿವರ ಪರಿಶೀಲನೆಗಾಗಿ ಆಯ್ಕೆ ಮಾಡಿಕೊಳ್ಳಲಾಗಿದ್ದಿತು. ಎಲ್ಲಾ ಪ್ರಾದೇಶಿಕ ಸಾರಿಗೆ ಕಚೇರಿಗಳು/ಉಪ–ಪ್ರಾದೇಶಿಕ ಸಾರಿಗೆ ಕಚೇರಿಗಳ ಮಾಹಿತಿಯ ವಿಶ್ಲೇಷಣೆಯನ್ನೂ ಕೂಡ ಮಾಡಲಾಯಿತು. ಅಲ್ಲದೇ, 15 ತನಿಖಾ ಠಾಣೆಗಳ ಪೈಕಿ ಆರು ನೆರೆಯ ರಾಜ್ಯಗಳಿಗೆ ಸಂಬಂಧಿಸಿದಂತೆ ಪ್ರತಿಯೊಂದು ರಾಜ್ಯದ ಸೀಮೆಯಲ್ಲಿದ್ದಂತಹ ಒಂದು ತನಿಖಾ ಠಾಣೆಯಂತೆ ಆರು[2] ತನಿಖಾ ಠಾಣೆಗಳಲ್ಲಿ ನಿರ್ವಹಿಸಿದ್ದಂತಹ ದಾಖಲೆಗಳನ್ನು ಪರೀಕ್ಷಿಸಲಾಯಿತು.

[1] ಆಟೋ–ರಿಕ್ಷಾ ಪರ್ಮಿಟ್ಟುಗಳು ಹಾಗೂ ಸಾರಿಗೆ ನಿಗಮ, ಬಾಗಲಕೋಟೆ, ಬೆಳಗಾವಿ, ಬೆಂಗಳೂರು (ಕೇಂದ್ರ), ಬೆಂಗಳೂರು (ಪೂರ್ವ), ಭಾಲ್ಕಿ, ಧಾರವಾಡ, ಇಲೆಕ್ಟ್ರಾನಿಕ್ಸ್ ಸಿಟಿ, ಗದಗ, ಹೊಸಪೇಟೆ, ಹುಣಸೂರು, ಕಲಬುರ್ಗಿ, ಕೊಪ್ಪಳ, ಕೆ.ಆರ್.ಪುರಂ, ಮಧುಗಿರಿ, ಮೈಸೂರು (ಪಶ್ಚಿಮ), ರಾಯಚೂರು, ಸಾಗರ, ಸಕಲೇಶಪುರ ಹಾಗೂ ಯಲಹಂಕ.

[2] ಅತ್ತೀಬೆಲೆ, ಬಾಗೇಪಲ್ಲಿ, ಹುಮ್ನಾಬಾದ್, ನಿಪ್ಪಾಣಿ, ರಾಮನಗರ ಹಾಗೂ ತಲಪಾಡಿ

### 5.4.1.5 ವಿಧಾನ

ಎಲ್ಲಾ ಪ್ರಾದೇಶಿಕ ಸಾರಿಗೆ ಕಚೇರಿಗಳು/ಉಪ-ಪ್ರಾದೇಶಿಕ ಸಾರಿಗೆ ಕಚೇರಿಗಳು ಹಾಗೂ ತನಿಖಾ ಠಾಣೆಗಳ ವಾಹನ (VAHAN) ತಂತ್ರಾಂಶದ ಹಿನ್ನೆಲೆ ದತ್ತಸಂಚಯವನ್ನು ಪಡೆದುಕೊಳ್ಳಲಾಯಿತು ಹಾಗೂ ಐಡಿಇಎ ತಂತ್ರಾಂಶವನ್ನು ಬಳಸಿಕೊಂಡು ವಿಶ್ಲೇಷಿಸಲಾಯಿತು. ಬಳಕೆಯಲ್ಲಿಲ್ಲದ ವಾಹನಗಳು ಎಂಬುದಾಗಿ ಘೋಷಿಸಲ್ಪಟ್ಟಿದ್ದ ವಾಹನಗಳು, ತೆರಿಗೆಯ ಬಾಕಿಗಳ ವಸೂಲಾತಿ, ಸ್ಥಿರತೆಯ ಪ್ರಮಾಣ ಪತ್ರಗಳ ನವೀಕರಣ ಹಾಗೂ ನೋಂದಣಿ ಪ್ರಮಾಣ ಪತ್ರಗಳನ್ನು ನವೀಕರಣಗೊಳಿಸದೇ ಇರುವ ವಾಹನಗಳ ಮೇಲೆ ತೆಗೆದುಕೊಳ್ಳಲಾಗಿದ್ದಂತಹ ಅನುಸರಣಾ ಕ್ರಮಗಳನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಆಯ್ಕೆ ಮಾಡಲಾದ 20 ಪ್ರಾದೇಶಿಕ ಸಾರಿಗೆ ಕಚೇರಿಗಳು/ಉಪ-ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ಹಾಗೂ ಆರು ತನಿಖಾ ಠಾಣೆಗಳಲ್ಲಿ ನಿರ್ವಹಿಸಲ್ಪಟ್ಟಿದ್ದಂತಹ ದಾಖಲೆಗಳನ್ನು ಪರಿಶೀಲಿಸಲಾಯಿತು.

ಒಂದು ಪ್ರವೇಶ ಸಭೆಯನ್ನು ಸಾರಿಗೆ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಹಾಗೂ ಸಾರಿಗೆ ಮತ್ತು ರಸ್ತೆ ಸುರಕ್ಷತೆಯ ಆಯುಕ್ತರವರ ಜೊತೆ ಮಾರ್ಚ್ 2015ರಲ್ಲಿ ನಡೆಸಲಾಯಿತು, ಆ ಸಭೆಯಲ್ಲಿ ಉದ್ದೇಶಗಳು, ವ್ಯಾಪನೆ ಹಾಗೂ ವಿಧಾನಗಳನ್ನು ಸವಿವರವಾಗಿ ಚರ್ಚಿಸಲಾಯಿತು. ಒಂದು ನಿರ್ಗಮನ ಸಭೆಯನ್ನು 21 ಅಕ್ಟೋಬರ್ 2015ರಂದು ನಡೆಸಲಾಯಿತು, ಆ ಸಭೆಯಲ್ಲಿ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅಂಶಗಳು, ನಿರ್ಣಯಗಳು ಹಾಗೂ ಶಿಫಾರಸುಗಳನ್ನು ಕರ್ನಾಟಕ ಸರ್ಕಾರದ ಸಾರಿಗೆ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಹಾಗೂ ಸಾರಿಗೆ ಮತ್ತು ರಸ್ತೆ ಸುರಕ್ಷತೆಯ ಆಯುಕ್ತರವರ ಜೊತೆ ಚರ್ಚಿಸಲಾಯಿತು.

### 5.4.1.6 ಕೃತಜ್ಞತೆಗಳು

ಲೆಕ್ಕಪರಿಶೋಧನೆಗಾಗಿ ಅಗತ್ಯ ಮಾಹಿತಿ ಹಾಗೂ ದಾಖಲೆಗಳನ್ನು ಒದಗಿಸುವಲ್ಲಿ ಕರ್ನಾಟಕ ಸರ್ಕಾರದ ಸಾರಿಗೆ ಇಲಾಖೆಯು ನೀಡಿದ ಸಹಕಾರಕ್ಕೆ ನಾವು ಈ ಮೂಲಕ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇವೆಪ್ರವೇಶ ಹಾಗೂ ನಿರ್ಗಮನ ಸಭೆಗಳಲ್ಲಿ ಹಾಗೂ ಲೆಕ್ಕಪರಿಶೋಧನೆಯ ವೇಳೆಯಲ್ಲಿ ಸರ್ಕಾರ/ಇಲಾಖೆಯು ನೀಡಿದ ಅಮೂಲ್ಯ ಮಾಹಿತಿಗಾಗಿಯೂ ನಾವು ಈ ಮೂಲಕ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇವೆ.

ಈ ವಿಷಯದ ಮೇಲೆ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಪ್ರಮುಖ ಅಂಶಗಳನ್ನು ಮುಂದಿನ ಕಂಡಿಕೆಗಳಲ್ಲಿ ತಿಳಿಸಲಾಗಿದೆ.

## 5.4.2 ಮೋಟಾರು ವಾಹನಗಳ ನೋಂದಣಿ ಮತ್ತು ನಿಯಂತ್ರಣ

ಹೊಸ ವಾಹನಗಳಿಗೆ ಸಂಬಂಧಿಸಿದಂತೆ, ಇಲಾಖೆಯು ಅಳವಡಿಸಿಕೊಂಡಿದ್ದಂತಹ ನಿಯಂತ್ರಣಗಳು ತಕ್ಕಮಟ್ಟಿಗೆ ಸಮರ್ಪಕವಾಗಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯ ವಿಶ್ಲೇಷಣೆಯು ತೋರಿಸಿಕೊಟ್ಟಿತು. ಈ ಕೆಳಗಿನ ವಿಷಯಗಳಿಗೆ ಸಂಬಂಧಿಸಿದಂತೆ ಕೆಲವು ನಿಯಂತ್ರಣ ಲೋಪದೋಷಗಳನ್ನು ಗಮನಿಸಲಾಯಿತು:

(i) ಮೋಟಾರು ವಾಹನಗಳ ಅಧಿನಿಯಮ, 1988ರ ಅನುವುಗಳನ್ನು ಅನುಸರಿಸದಿದ್ದ ಕಾರಣ ಹೊರ ರಾಜ್ಯಗಳಿಂದ ವಲಸೆ ಬಂದಿರುವ ವಾಹನಗಳ ನೊಂದಣಿ;

(ii) ಸಾಗಾಣಿಕೆ ವಾಹನಗಳಿಗೆ ಸಂಬಂಧಿಸಿದಂತೆ ಸುಸ್ಥಿತಿ ಪ್ರಮಾಣ ಪತ್ರಗಳನ್ನು ಎರಡು ವರ್ಷಗಳಿಗೂ ಮೀರಿದಂತೆ ನೀಡಿದ್ದ ಕಾರಣ ಸಾಗಣೆ ವಾಹನಗಳಿಗೆ ಸಂಬಂಧಿಸಿದಂತೆ ಸುಸ್ಥಿತಿ ಪ್ರಮಾಣ ಪತ್ರಗಳನ್ನು ನೀಡುವಿಕೆ/ನವೀಕರಣವನ್ನು ನೋಂದಣಿಯ ಸಮಯದಲ್ಲಿ ಜೀವಿತಾವಧಿ ತೆರಿಗೆ ಪಾವತಿಗೆ ಸಂಬಂಧಿಸಿದಂತೆ ಗುರುತಿಸಲಾಗಿದ್ದಿತು, ಸುಸ್ಥಿತಿ ಪ್ರಮಾಣ ಪತ್ರಗಳ ಸಮಯೋಚಿತ ನವೀಕರಣವನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಅನುಸರಣಾ ಕ್ರಮಗಳ ಅನುಪಸ್ಥಿತಿ, ಸುಸ್ಥಿತಿ ಪ್ರಮಾಣ ಪತ್ರ/ನೋಂದಣಿ ಪ್ರಮಾಣ ಪತ್ರ, ಇತ್ಯಾದಿಗಳ ನವೀಕರಣಕ್ಕೆ ಬಾಕಿ ಇರುವ ವಾಹನಗಳನ್ನು ಪತ್ತೆಹಚ್ಚುವುದಕ್ಕಾಗಿ ವಾಹನ ತಂತ್ರಾಂಶದಲ್ಲಿ ನಿಯಂತ್ರಣ ವ್ಯವಸ್ಥೆಯ ಅನುಪಸ್ಥಿತಿ.

### 5.4.2.1 ವಲಸೆ ಹೋಗುವುದರೊಂದಿಗೆ ಇಲಾಖೆಯ ತೆರಿಗೆ ಜಾಲ ಹಾಗೂ ಆಡಳಿತಾತ್ಮಕ ನಿಯಂತ್ರಣದಿಂದ ತಪ್ಪಿಸಿಕೊಳ್ಳುವ ಸಾಗಣೆ ವಾಹನಗಳು

ಕೇಂದ್ರ ಮೋಟಾರು ವಾಹನ ಅಧಿನಿಯಮ ಹಾಗೂ ಅದರ ಅಡಿಯಲ್ಲಿ ರೂಪಿಸಿರುವ ನಿಯಮಗಳ ಅಡಿಯಲ್ಲಿ, ಒಂದು ರಾಜ್ಯದಿಂದ ಮತ್ತೊಂದಕ್ಕೆ ವಲಸೆ ಹೋಗುವ ವಾಹನಗಳು ಮೂಲ (ಪ್ರಾರಂಭಿಕ) ರಾಜ್ಯದ ಪ್ರಾದೇಶಿಕ ಸಾರಿಗೆ ಕಚೇರಿಯಿಂದ ಆಕ್ಷೇಪಣಾ ರಹಿತ ಪ್ರಮಾಣ ಪತ್ರವನ್ನು ಪಡೆದುಕೊಳ್ಳತಕ್ಕದ್ದು ಹಾಗೂ ತಲುಪಬೇಕಾದ ರಾಜ್ಯದಲ್ಲಿ ಪ್ರಾದೇಶಿಕ ಸಾರಿಗೆ ಕಚೇರಿಗೆ ಅದನ್ನು ಸಲ್ಲಿಸತಕ್ಕದ್ದು. ಅದೇ ರೀತಿ, ರಾಜ್ಯದ ಒಳಗೆ ಒಂದು ಪ್ರಾದೇಶಿಕ ಸಾರಿಗೆ ಕಚೇರಿಯಿಂದ (ಮೂಲ/ಪ್ರಾರಂಭಿಕ) ಮತ್ತೊಂದಕ್ಕೆ (ತಲುಪಬೇಕಾದ ಸ್ಥಳ) ವಲಸೆ ಹೋಗುವ

ವಾಹನಗಳಿಗೆ ಸಂಬಂಧಿಸಿದಂತೆ ಕೇಂದ್ರ ಮೋಟಾರು ವಾಹನಗಳ ಅಧಿನಿಯಮದ ಪರಿಚ್ಛೇದ 49ರ[3] ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ವಿಧಾನವನ್ನು ಅನುಸರಿಸತಕ್ಕದ್ದು.

ಪ್ರತಿಯೊಂದು ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ/ಉಪ–ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ, ಆ ಕಚೇರಿಯ ಅಧಿಕಾರ ವ್ಯಾಪ್ತಿಯಿಂದ ರಾಜ್ಯದ ಒಳಗಿನ ಇತರೆ ಪ್ರಾದೇಶಿಕ ಸಾರಿಗೆ ಕಚೇರಿಯ ವ್ಯಾಪ್ತಿಗೆ ಅಥವಾ ಇತರೆ ರಾಜ್ಯಗಳಿಗೆ ಹೊರ ಸಾಗುವ ವಾಹನಗಳನ್ನು ದಾಖಲಿಸುವುದಕ್ಕಾಗಿ ವಾಹನ (VAHAN) ತಂತ್ರಾಂಶ ವ್ಯವಸ್ಥೆಯ ಆಕ್ಷೇಪಣಾ ರಹಿತ ಪ್ರಮಾಣ ಪತ್ರದ ಮಾಡ್ಯೂಲನ್ನು ಬಳಸಲಾಗುವುದು. ಆಕ್ಷೇಪಣಾ ರಹಿತ ಪ್ರಮಾಣ ಪತ್ರದ ಮಾಡ್ಯೂಲಿನಲ್ಲಿ ವಲಸೆ ಹೋಗುವಿಕೆಯನ್ನು ದಾಖಲಿಸಿದನಂತರ, ಪ್ರಾದೇಶಿಕ ಸಾರಿಕೆ ಕಚೇರಿಯು ಬಾಕಿ ಇರುವ ನಿಯತಕಾಲಿಕ ತೆರಿಗೆಗಳ ಸಂಗ್ರಹಣೆ, ಸುಸ್ಥಿತಿ ಪ್ರಮಾಣ ಪತ್ರ ಇತ್ಯಾದಿಗಳಿಗಾಗಿ ಆ ವಾಹನದ ಮುಂದಿನ ಮೇಲ್ವಿಚಾರಣೆಯನ್ನು ನಿಲ್ಲಿಸುವುದು. ತದನಂತರ, ಆ ವಾಹನದ ಮೇಲೆ ಆಡಳಿತಾತ್ಮಕ ನಿಯಂತ್ರಣವನ್ನು ಚಲಾಯಿಸುವ ಅಧಿಕಾರವು ಆ ವಾಹನವು ತಲುಪಿದ ಪ್ರದೇಶದ ಪ್ರಾದೇಶಿಕ ಸಾರಿಗೆ ಅಧಿಕಾರಿಯವರದ್ದಾಗಿರುತ್ತದೆ.

ಅಂತಹ ವಾಹನಗಳ ಮೇಲೆ ಆಡಳಿತಾತ್ಮಕ ನಿಯಂತ್ರಣವು ಮುಂದುವರೆದುಕೊಂಡು ಹೋಗಿರುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ರಾಜ್ಯದ ಒಳಗೆ ಇತರೆ ಪ್ರಾದೇಶಿಕ ಸಾರಿಗೆ ಕಚೇರಿಗಳ ವ್ಯಾಪ್ತಿಗೆ ವಲಸೆ ಹೋಗಿರುವುದಾಗಿ ತಿಳಿಸಲ್ಪಟ್ಟಿದ್ದಂತಹ ವಾಹನಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಯು ರಾಜ್ಯದಲ್ಲಿನ ಎಲ್ಲಾ ಪ್ರಾದೇಶಿಕ ಸಾರಿಗೆ ಕಚೇರಿಗಳ ಆಕ್ಷೇಪಣಾ ರಹಿತ ಪ್ರಮಾಣ ಪತ್ರದ ಮಾಡ್ಯೂಲಿನಲ್ಲಿ ದಾಖಲಿಸಲಾಗಿದ್ದಂತಹ ಪ್ರಕರಣಗಳನ್ನು ಪರೀಕ್ಷಿಸಿತು.

ಏಪ್ರಿಲ್ 2009ರಿಂದ ಮಾರ್ಚ್ 2015ರ ನಡುವಿನಲ್ಲಿ, ರಾಜ್ಯದಲ್ಲಿನ ಎಲ್ಲಾ ಪ್ರಾದೇಶಿಕ ಸಾರಿಗೆ ಕಚೇರಿಗಳು/ಸಹಾಯಕ ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ನೋಂದಣಿ ಮಾಡಿಸಿ ತ್ರೈಮಾಸಿಕ ತೆರಿಗೆಯನ್ನು ಪಾವತಿಸುತ್ತಿದ್ದಂತಹ ಹಾಗೂ ರಾಜ್ಯದ ಒಳಗೆ ಇತರೆ ಪ್ರಾದೇಶಿಕ ಸಾರಿಗೆ ಕಚೇರಿಗಳ ಪ್ರದೇಶಕ್ಕೆ ವಲಸೆ ಹೋಗಿದ್ದಂತಹ ಸಾರಿಗೆ ವಾಹನಗಳಿಗೆ ಸಂಬಂಧಿಸಿದಂತೆ ಆಕ್ಷೇಪಣಾ ರಹಿತ ಪ್ರಮಾಣಾ ಪತ್ರದ ಟೇಬಲ್ಲುಗಳಲ್ಲಿ 59,939 ಸಾರಿಗೆ ವಾಹನಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಮಾಡಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇವುಗಳನ್ನು ವಾಹನಗಳು ತಲುಪಲಾಗಿದ್ದಂತಹ ಪ್ರದೇಶದ ಕಚೇರಿಯ ನೋಂದಣಿ ವಿವರಗಳ ಜೊತೆ ಅಡ್ಡ ಪರಿಶೀಲನೆ ಮಾಡಲಾಗಿ 4,281 ವಾಹನಗಳು ತಲುಪಿದ ಪ್ರದೇಶದಲ್ಲಿ ನೋಂದಣಿ ಮಾಡಿಸಿಕೊಳ್ಳಲು ವಿಫಲಾಗಿದ್ದವು ಎಂಬುದು ತಿಳಿದುಬಂದಿತು. ಈ ವಾಹನಗಳು ವಲಸೆಗೊಂಡ ದಿನಾಂಕದನಂತರ ಬಾಕಿ ಇರುವ ತ್ರೈಮಾಸಿಕ ತೆರಿಗೆಯನ್ನು ಪಾವಾತಿಸಿರಲಿಲ್ಲ ಎಂಬುದನ್ನು ಪ್ರಾದೇಶಿಕ ಸಾರಿಗೆ ಕಚೇರಿಗಳು/ಸಹಾಯಕ ಪ್ರಾದೇಶಿಕ ಸಾರಿಗೆ ಕಚೇರಿಗಳು ಹಾಗೂ ತನಿಖಾ ಠಾಣೆಗಳ ವಾಹನ ತಂತ್ರಾಂಶ ವ್ಯವಸ್ಥೆಯಲ್ಲಿನ ತೆರಿಗೆ ಸಂಗ್ರಹಣಾ ಟೇಬಲ್ಲಿನ ಪರಿಶೀಲನೆಯು ತೋರಿಸಿಕೊಟ್ಟಿತು. 31 ಮಾರ್ಚ್ 2015ರಲ್ಲಿದ್ದಂತೆ ಈ ವಾಹನಗಳಿಂದ ಬಾಕಿಯಿದ್ದಂತಹ ತ್ರೈಮಾಸಿಕ ತೆರಿಗೆಯ ಒಟ್ಟಾರೆ ಮೊತ್ತವು ₹ 13.17 ಕೋಟಿ ಆಗಿದ್ದಿತು. ಈ ವಾಹನಗಳು ತಲುಪಿದ ನಿರ್ದಿಷ್ಟ ಪ್ರದೇಶಗಳಲ್ಲಿ ಅವುಗಳ ನೋಂದಣಿಯನ್ನು ಖಚಿತಪಡಿಸಿಕೊಳ್ಳದೆಯೇ, ಈ ವಾಹನಗಳ ಮೇಲಿನ ತಮ್ಮ ಆಡಳಿತಾತ್ಮಕ ನಿಯಂತ್ರಣವನ್ನು ಚಲಾಯಿಸುವಲ್ಲಿ ಸಂಬಂಧಿತ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು/ಸಹಾಯಕ ಪ್ರಾದೇಶಿಕ ಅಧಿಕಾರಿಗಳ ವಿಫಲತೆಗಳು ಈ ವಾಹನಗಳು ತೆರಿಗೆ ಜಾಲವನ್ನು ಹಾಗೂ ಸಾಗಣೆ ವಾಹನಗಳ ಮೇಲೆ ಇಲಾಖೆಯು ಚಲಾಯಿಸುವ ಇತರೆ ಆಡಳಿತಾತ್ಮಕ ನಿಯಂತ್ರಣಗಳಿಂದ ತಪ್ಪಿಸಿಕೊಳ್ಳಲು ಅನುವು ಮಾಡಿಕೊಟ್ಟವು.

ಕೇಂದ್ರೀಕೃತ ದತ್ತಸಂಚಯ ಜಾಲವನ್ನು ಹೊಂದಿರುವ ವಾಹನ ತಂತ್ರಾಂಶದ ಹೊಸ ಅವತರಣಿಕೆಯಲ್ಲಿ ಈ ಸಮಸ್ಯೆಯನ್ನು ಬಗೆಹರಿಸಲಾಗುವುದು ಎಂಬುದಾಗಿ ಸರ್ಕಾರ/ಇಲಾಖೆಯು ನಿರ್ಗಮನ ಸಭೆಯಲ್ಲಿ ತಿಳಿಸಿತು.

ಜಾಲ(ವೆಬ್) ಆಧಾರಿತ ತಂತ್ರಾಂಶ ಅನ್ವಯದ ಜೊತೆಯಲ್ಲಿ ಒಂದು ಕೇಂದ್ರೀಕೃತ ದತ್ತಸಂಚಯವು ಇಲಾಖೆಯು ಒದಗಿಸುವ ಸೇವೆಗಳು, ನೋಂದಣಿ, ಶುಲ್ಕಗಳು, ತೆರಿಗೆಗಳು ಇತ್ಯಾದಿಗಳ ಬಗ್ಗೆ ಸಾರ್ವಜನಿಕರು ಅರಿತುಕೊಳ್ಳಲು ಅವಕಾಶ ಮಾಡಿಕೊಡುತ್ತದೆ ಹಾಗೂ ವಾಹನಗಳ ಹೊಸ ವಿಳಾಸವನ್ನು ಸೆರೆಹಿಡಿಯುವ ಮತ್ತು ಅದನ್ನು ಅಧಿಕಾರ ವ್ಯಾಪ್ತಿಯ ನೋಂದಣಿ ಅಧಿಕಾರಿಯವರಿಗೆ ನೀಡುವ ಮೂಲಕ ಸುಲಭ ಪರಿಹಾರವನ್ನು ಒದಗಿಸಬಹುದು. ಈ ಉದ್ದೇಶಕ್ಕಾಗಿ ಪ್ರತಿಯೊಂದು ಪ್ರಾದೇಶಿಕ ಸಾರಿಗೆ ಕಚೇರಿಯ ಅಧಿಕಾರ ವ್ಯಾಪ್ತಿಯ ಒಂದು ಮಾಸ್ಟರ್ ಟೇಬಲನ್ನು ವಾಹನ (VAHAN) ತಂತ್ರಾಂಶ ಅನ್ವಯದಲ್ಲಿ ಸೃಷ್ಟಿಸಬೇಕು ಹಾಗೂ ಇಂದಿನದಿನದನ್ನಾಗಿ ಮಾಡಬೇಕು. ಈ ಕ್ರಮಗಳ ಬಗ್ಗೆ 'ವಾಹನ'ದ ('VAHAN') ಮೇಲಿನ ಮಾಹಿತಿ ವ್ಯವಸ್ಥೆಗಳ ಲೆಕ್ಕಪರಿಶೋಧನೆಯಲ್ಲಿ ತಿಳಿಸಲಾಗಿದ್ದಿತು ಹಾಗೂ ಈ ಸಲಹೆಗಳನ್ನು ಇಲಾಖೆಯು ಒಪ್ಪಿಕೊಂಡಿದ್ದಿತು. ಆದಾಗ್ಯೂ, ನವಂಬರ್ 2015ರಲ್ಲಿದ್ದಂತೆ, ಈ ಯಾವುದೇ ಸಲಹೆಗಳನ್ನೂ ಕಾರ್ಯಗತಗೊಳಿಸಿರಲಿಲ್ಲ.

[3] ಮೋಟಾರು ವಾಹನಗಳ ಅಧಿನಿಯಮ, 1988ರ ಪರಿಚ್ಛೇದ 49 – ಒಂದು ಮೋಟಾರು ವಾಹನದ ಮಾಲೀಕರು ನೋಂದಣಿ ಪ್ರಮಾಣಪತ್ರದಲ್ಲಿ ದಾಖಲಿಸಲಾಗಿರುವ ವಿಳಾಸದಲ್ಲಿ ವಾಸಿಸುವುದನ್ನು ಬಿಟ್ಟಿದ್ದು ಅಥವಾ ತಮ್ಮ ವ್ಯಾಪಾರ ಮಾಡುವುದನ್ನು ನಿಲ್ಲಿಸಿದ್ದು ಹಾಗೂ ಹೊಸ ವಿಳಾಸವು ಮತ್ತೊಂದು ನೋಂದಣಿ ಅಧಿಕಾರಿಯವರ ಅಧಿಕಾರ ವ್ಯಾಪ್ತಿಯಲ್ಲಿ ಬರುವುದಿದ್ದಲ್ಲಿ, ಅವರು ಅಂತಹ ವಿಳಾಸ ಬದಲಾವಣೆಯ ದಿನಾಂಕದಿಂದ ಮೂವತ್ತು ದಿನಗಳ ಒಳಗೆ ಹೊಸ ವಿಳಾಸವನ್ನು ತಿಳಿಸತಕ್ಕದ್ದು ಹಾಗೂ ನೋಂದಣಿ ಪ್ರಮಾಣಪತ್ರವನ್ನು ಮೂಲ ನೋಂದಣಿ ಅಧಿಕಾರಿಗಳಲ್ಲದ ಪ್ರಸ್ತುತ ಅವರು ವಾಸಿಸುತ್ತಿರುವ/ವ್ಯಾಪಾರ ಮಾಡುತ್ತಿರುವ ಪ್ರದೇಶದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಕಳುಹಿಸಿಕೊಡಬೇಕು ಹಾಗೂ ಅವರು ಬದಲಾವಣೆಗೊಂಡಿರುವ ವಿಳಾಸವನ್ನು ಮೂಲ ನೋಂದಣಿ ಅಧಿಕಾರಿಯವರಿಗೆ ತಿಳಿಸುವರು.

**ಶಿಫಾರಸು ಸಂಖ್ಯೆ 1: ವಾಹನ ಮಾಲೀಕರುಗಳು ಇಲಾಖೆಯು ಒದಗಿಸುವ ಸೇವೆಗಳನ್ನು ಉಪಯೋಗಿಸಿಕೊಳ್ಳಬಹುದಾದಂತಹ, ತೆರಿಗೆಗಳನ್ನು ಪಾವತಿಸಬಹುದಾಂತಹ ಹಾಗೂ ಸ್ವತ: ತಾವೇ ವಿಳಾಸಗಳು, ಇತ್ಯಾದಿಗಳು ಯಾವುದಾದರೂ ಇದ್ದಲ್ಲಿ ಇಂದಿನದಿನದನ್ನಾಗಿ ಮಾಡಿಕೊಳ್ಳುವ ರೀತಿಯಲ್ಲಿ ಇಲಾಖೆಯು ಒಂದು ಕೇಂದ್ರೀಕೃತ ದತ್ತಸಂಚಯದ ಜೊತೆಯಲ್ಲಿ ಒಂದು ಜಾಲ (ವೆಬ್) ಆಧಾರಿತ ತಂತ್ರಾಂಶ ವ್ಯವಸ್ಥೆಯನ್ನು ಒದಗಿಸಬೇಕು.**

### 5.4.2.2 ವಾಹನಗಳ ಸುಸ್ಥಿತಿಯನ್ನು ಪರೀಕ್ಷಿಸದಿದ್ದುದು ಹಾಗೂ ನಿಯತಕಾಲಿಕವಾಗಿ ಪ್ರಮಾಣೀಕರಿಸದಿದ್ದುದು

ಒಂದು ಸಾಗಣೆಯೇತರ ವಾಹನಕ್ಕೆ ನೀಡಲಾಗುವ ನೋಂದಣಿ ಪ್ರಮಾಣ ಪತ್ರವು ನೋಂದಣಿಯ ದಿನಾಂಕದಿಂದ 15 ವರ್ಷಗಳ ಅವಧಿಗೆ ಮಾತ್ರ ಊರ್ಜಿತವಾಗಿರುತ್ತದೆ ಎಂಬುದಾಗಿ ಕೇಂದ್ರ ಮೋಟಾರು ವಾಹನಗಳ ಅಧಿನಿಯಮ ನಿರ್ದಿಷ್ಟಪಡಿಸಿದೆ. ಸಾಗಣೆ ವಾಹನಗಳಿಗೆ ಸಂಬಂದಿಸಿದಂತೆ, ಒಂದು ಸುಸ್ಥಿತಿ ಪ್ರಮಾಣಪತ್ರವನ್ನು ನೋಂದಣಿ ಮಾಡಿಸಿದ ದಿನಾಂಕದಿಂದ ಎರಡು ವರ್ಷಗಳ ಅವಧಿಗೆ ನೀಡಲಾಗುವುದು ಹಾಗೂ ತದನಂತರ ಪ್ರತೀ ವರ್ಷವೂ ನವೀಕರಿಸತಕ್ಕದ್ದು. ಒಂದು ಸಾಗಣೆ ವಾಹನವನ್ನು, ಅದು ಒಂದು ಸುಸ್ಥಿತಿ ಪ್ರಮಾಣಪತ್ರವನ್ನು ಹೊಂದಿರದ ಹೊರತು ಕಾನೂನುಬದ್ಧವಾಗಿ ನೋಂದಣಿ ಮಾಡಲಾಗಿದೆ ಎಂಬುದಾಗಿ ಭಾವಿಸಲಾಗದು.

ಕೇಂದ್ರ ಮೋಟಾರು ವಾಹನಗಳ ನಿಯಮಗಳು, 1989ರ ನಿಯಮ 62ರ ಅನುವುಗಳ ಪ್ರಕಾರ, ಒಂದು ಸಾಗಣೆಯೇತರ ವಾಹನದ ನೋಂದಣಿ ಪ್ರಮಾಣಪತ್ರವನ್ನು ನವೀಕರಣದ ಸಮಯದಲ್ಲಿ ಅಥವಾ ಒಂದು ಸಾಗಣೆ ವಾಹನದ ಸುಸ್ಥಿತಿ ಪ್ರಮಾಣಪತ್ರದ ನವೀಕರಣದ ಸಮಯದಲ್ಲಿ ಮೋಟಾರು ವಾಹನಗಳ ಪರೀಕ್ಷಕರು ಸುಸ್ಥಿತಿ ಪರೀಕ್ಷಣೆಯನ್ನು ನಡೆಸತಕ್ಕದ್ದು. ಒಂದು ವಾಹನದಲ್ಲಿನ 15 ನಿರ್ದಿಷ್ಟ ಭಾಗಗಳ ಪರೀಕ್ಷಣೆಯನ್ನು ನಡೆಸಿದನಂತರವಷ್ಟೇ ಸುಸ್ಥಿತಿ ಪ್ರಮಾಣಪತ್ರವನ್ನು ನೀಡತಕ್ಕದ್ದು ಎಂಬುದಾಗಿ ಅದು ನಿರ್ದಿಷ್ಟಪಡಿಸಿದೆ. ಸರಾಸರಿಯಾಗಿ, ಪ್ರತಿಯೊಂದು ನಿರ್ದಿಷ್ಟ ಭಾಗಗಳ ಅಡಿಯಲ್ಲಿ ಮೂರು ವಿವಿಧ ಕಡ್ಡಾಯ ಪರೀಕ್ಷಣೆಗಳನ್ನು ನಿರ್ದಿಷ್ಟಪಡಿಸಲಾಗಿದೆ. ಆದ್ದರಿಂದ, ಓರ್ವ ಮೋಟಾರು ವಾಹನಗಳ ಪರೀಕ್ಷಕರು, ಒಂದು ವಾಹನಕ್ಕೆ ಸುಸ್ಥಿತಿ ಪ್ರಮಾಣಪತ್ರವನ್ನು ನೀಡುವ ವೇಳೆಯಲ್ಲಿ ಸುಸ್ಥಿತಿಯ ಕನಿಷ್ಠ 45 ಪರೀಕ್ಷಣೆಗಳನ್ನು ನಡೆಸಿರತಕ್ಕದ್ದು.

ವಾಹನ (VAHAN) ದತ್ತಸಂಚಯದ ವಿಶ್ಲೇಷಣೆಯು ಈ ಕೆಳಗಿನ ಅಂಶಗಳನ್ನು ತೋರಿಸಿಕೊಟ್ಟಿತು:

1. ಏಪ್ರಿಲ್ 1995 ಹಾಗೂ ಮಾರ್ಚ್ 2000ದ ನಡುವೆ ನೋಂದಣಿಯಾಗಿದ್ದಂತಹ 12,02,838 ಸಾಗಣೆಯೇತರ ವಾಹನಗಳಿದ್ದವು, ಅವು ತಮ್ಮ ನೋಂದಣಿ ಪ್ರಮಾಣಪತ್ರವನ್ನು ಏಪ್ರಿಲ್ 2010 ಹಾಗೂ ಮಾರ್ಚ್ 2015ರ ನಡುವೆ ನೋಂದಣಿ ಮಾಡಿಸಿಕೊಳ್ಳಲು ಬಾಕಿಯಿದ್ದವು. ಇವುಗಳ ಪೈಕಿ, ಕೇವಲ 2,33,132 ವಾಹನಗಳು (ಅಂದರೆ ಶೇಕಡಾ 19.38) ತಮ್ಮ ನೋಂದಣಿ ಪ್ರಮಾಣಪತ್ರವನ್ನು ನವೀಕರಿಸಿಕೊಂಡಿದ್ದವು ಹಾಗೂ ಉಳಿಕೆ ಶೇಕಡಾ 80.62ರಷ್ಟು ವಾಹನಗಳು ಅಧಿನಿಯಮದ ಅನುವುಗಳನ್ನು ಅನುಸರಿಸಿರಲಿಲ್ಲ.
2. ಏಪ್ರಿಲ್ 2000 ಹಾಗೂ ಮಾರ್ಚ್ 2013ರ ನಡುವೆ ರಾಜ್ಯದಲ್ಲಿ ನೋಂದಣಿಯಾಗಿದ್ದಂತಹ 9,43,687 ಸಾಗಣೆ ವಾಹನಗಳಿಗೆ ಸಂಬಂಧಿಸಿದಂತೆ ಸುಸ್ಥಿತಿ ಪ್ರಮಾಣಪತ್ರಗಳು ಏಪ್ರಿಲ್ 2010 ಹಾಗೂ ಮರ್ಚ್ 2015ರ ನಡುವೆ ಕಡೆಯಪಕ್ಷ ಒಂದು ಸಲವಾದರೂ (ಗರಿಷ್ಠ ಐದು ಸಲ) ನವೀಕರಿಸಲು ಬಾಕಿಯಿದ್ದವು ಎಂಬುದನ್ನು ಸುಸ್ಥಿತಿ ಪ್ರಮಾಣಪತ್ರಗಳ ಮಾಹಿತಿಯು ತೋರಿಸಿಕೊಟ್ಟಿತು. ಇವುಗಳ ಪೈಕಿ, 4,04,385 ವಾಹನಗಳು (ಶೇಕಡಾ 42.85) ಏಪ್ರಿಲ್ 2010 ಹಾಗೂ ಮಾರ್ಚ್ 2015ರ ನಡುವೆ ಒಂದು ಸಲವೂ ಸುಸ್ಥಿತಿ ಪರೀಕ್ಷಣೆಗೆ ಬಂದಿರಲಿಲ್ಲ ಹಾಗೂ 2,05,868 ವಾಹನಗಳು (ಶೇಕಡಾ 21.82) ಕೆಲವು ಅವಧಿಯವರೆಗೆ ಸುಸ್ಥಿತಿ ಪರೀಕ್ಷಣೆಗೆ ಹಾಜರಾದನಂತರದ ಅವಧಿಗಳಿಗೆ ನವೀಕರಿಸುವುದನ್ನು ನಿಲ್ಲಿಸಿಬಿಟ್ಟಿದ್ದವು. ಮತ್ತೊಂದು ಶೇಕಡಾ 14.32 (1,35,158 ವಾಹನಗಳು) ಕಡ್ಡಾಯ ವಾರ್ಷಿಕ ಅಗತ್ಯತೆಯ ಪ್ರತಿಯಾಗಿ ಕೇವಲ ಎಲ್ಲೋ ಒಮ್ಮೊಮ್ಮೆ ಎರಡು ಅಥವಾ ಇನ್ನೂ ಹೆಚ್ಚಿನ ವರ್ಷಗಳ ಅಂತರದನಂತರ ಪರೀಕ್ಷಣೆಗೆ ಹಾಜರಾಗಿದ್ದವು. ಸುಸ್ಥಿತಿ ಪ್ರಮಾಣಪತ್ರಗಳಿಗೆ ಸಂಬಂಧಿತ ಅನುವುಗಳನ್ನು ಅನುಸರಿಸದಿದ್ದುದರ ಒಟ್ಟಾರೆ ಶೇಕಡಾವಾರು 78.99 (7,45,411 ವಾಹನಗಳು) ಆಗಿದ್ದಿತು.

ಸುಸ್ಥಿತಿ ಪ್ರಮಾಣಪತ್ರಗಳ ನವೀಕರಿಸುವಿಕೆಗೆ ಸಂಬಂಧಿಸಿದಂತೆ ಮೋಟಾರು ವಾಹನಗಳ ಅಧಿನಿಯಮದ ಅನುವುಗಳನ್ನು ಅನುಸರಿಸುವಲ್ಲಿನ ವಿಫಲತೆ ಹಾಗೂ ಅಂತಹ ವಾಹನಗಳನ್ನು ಒಂದು ಸಾರ್ವಜನಿಕ ಸ್ಥಳದಲ್ಲಿ ಬಳಸುವುದು ರಸ್ತೆ ಸುರಕ್ಷತೆ ದೃಷ್ಟಿಯಿಂದ ಅಪಾಯಕಾರಿಯಾಗಿರುತ್ತದೆ ಹಾಗೂ ವಾಯು ಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಿತ ಮಾನದಂಡಗಳ ಜೊತೆ ರಾಜಿಯಾಗುತ್ತದೆ. ಅನುವುಗಳನ್ನು ಅಧಿಕ ಮಟ್ಟದಲ್ಲಿ ಅನುಸರಿಸದಿದ್ದುದಕ್ಕೆ ಸಂಬಂಧಿಸಿದ ಹಾಗೂ ಇಲಾಖೆಯು ನಡೆಸಿದ್ದ ಸುಸ್ಥಿತಿ ಪರೀಕ್ಷಣೆಗಳ ಮಾಹಿತಿಯನ್ನು ಲೆಕ್ಕಪರಿಶೋಧನೆಯು ವಿಶ್ಲೇಷಣೆ ಮಾಡಲಾಗಿ ಈ ಕೆಳಗಿನ ಅಂಶಗಳನ್ನು ತೋರಿಸಿಕೊಟ್ಟಿತು:

1. ಮೋಟಾರು ವಾಹನಗಳ ಅಧಿನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಎರಡು ವರ್ಷಗಳ ಊರ್ಜಿತಾವಧಿಗೆ ಪ್ರತಿಯಾಗಿ ಸಾಗಣೆ ವಾಹನಗಳ ನೋಂದಣಿಯ ದಿನಾಂಕದಿಂದ 15 ವರ್ಷಗಳ ಅವಧಿಗೆ ಸುಸ್ಥಿತಿಯ ಊರ್ಜಿತಾವಧಿಗೆ ದೃಢೀಕರಣ ಪ್ರಮಾಣಪತ್ರಗಳನ್ನು ನೀಡಿದ್ದಂತಹ 2,44,737 ಪ್ರಕರಣಗಳಿದ್ದವು. ಇದು ಸುಸ್ಥಿತಿ ಊರ್ಜಿತಾವಧಿಯನ್ನು ವಾಹನ ಪ್ರವರ್ಗಕ್ಕೆ ಸಂಪರ್ಕಿಸುವ ಬದಲು ತೆರಿಗೆ ಪಾವತಿ ಆಯ್ಕೆ ವಿವರಗಳಿಗೆ ಸಂಪರ್ಕಿಸಿದ್ದ ಕಾರಣದಿಂದ ಸಂಭವಿಸಿದ್ದಿತು.

2. ಏಳು ತಿಂಗಳುಗಳಿಂದ 10 ವರ್ಷಗಳ ವಿಳಂಬಗಳ ನಂತರ ಸುಸ್ಥಿತಿ ಪ್ರಮಾಣಪತ್ರಗಳಿಗಾಗಿ ಹಾಜರಾದಂತಹ 1,23,680 ವಾಹನಗಳಿಗೆ ಸಂಬಂಧಿಸಿದಂತೆ, ₹ 2.82 ಕೋಟಿ ಮೊತ್ತದಷ್ಟು ಹೆಚ್ಚುವರಿ ಶುಲ್ಕವನ್ನು ವಿಧಿಸಬೇಕಿದ್ದಿತು. ಇದಕ್ಕೆ ಪ್ರತಿಯಾಗಿ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು/ಉಪ–ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ₹ 54.90 ಲಕ್ಷ ಮೊತ್ತದಷ್ಟು ದಂಡವನ್ನು ಮಾತ್ರ ವಸೂಲಾತಿ ಮಾಡಿದ್ದು, ಇದರ ಪರಿಣಾಮದಿಂದ ₹ 2.27 ಕೋಟಿ ಮೊತ್ತದಷ್ಟು ಹೆಚ್ಚುವರಿ ತೆರಿಗೆ ಕಡಿಮೆ ವಿಧಿಕೆಯಾಗಿತ್ತು. ಈ ರೀತಿಯಾಗಿ, ಅನುವುಗಳನ್ನು ಅನುಸರಿಸದಿರುವುದಕ್ಕೆ ಸೂಕ್ತವಾದ ದಂಡವನ್ನು ವಿಧಿಸುವಲ್ಲಿ ಇಲಾಖೆಯು ವಿಫಲಗೊಂಡಿದ್ದಿತು.

3. ಏಪ್ರಿಲ್ 2010 ಹಾಗೂ ಮಾರ್ಚ್ 2015ರ ನಡುವೆ ಸುಸ್ಥಿತಿ ಪ್ರಮಾಣಪತ್ರಗಳಿಗಾಗಿ ಹಾಜರಾಗದಂತಹ 2,61,395 ಸಾಗಣೆ ವಾಹನಗಳು ವಿಳಾಸ ಬದಲಾವಣೆ, ತ್ರೈಮಾಸಿಕ ತೆರಿಗೆ ಪಾವತಿ, ಅಡಮಾನ ಇಟ್ಟಿದ್ದಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ತೆಗೆದುಹಾಕುವಿಕೆ, ಇವೇ ಮುಂತಾದ ವಿವಿಧ ಸೇವೆಗಳಿಗಾಗಿ ಅದೇ ಅವಧಿಯಲ್ಲಿ ಒಂದರಿಂದ 10 ಸಲ ಪ್ರಾದೇಶಿಕ ಸಾರಿಗೆ ಕಚೇರಿಗಳ ಜೊತೆ ವ್ಯವಹರಿಸಿದ್ದವು ಎಂಬುದನ್ನು ಗಮನಿಸಲಾಯಿತು ಆದರೆ, ವ್ಯವಸ್ಥೆಯಲ್ಲಿನ ಲೋಪದೋಷಗಳ ಕಾರಣ, ಆ ವಾಹನಗಳು ಸುಸ್ಥಿತಿ ಪ್ರಮಾಣಪತ್ರಗಳನ್ನು ಪಡೆದುಕೊಳ್ಳುವಲ್ಲಿ ತಪ್ಪಿತಸ್ತವಾಗಿರುವುದನ್ನು ಕಂಡುಹಿಡಿಯಲಿಲ್ಲ ಹಾಗೂ ಅದಕ್ಕಾಗಿ ಒತ್ತಾಯಪಡಿಸಲಿಲ್ಲ. ಕೇಂದ್ರ ಮೋಟಾರು ವಾಹನಗಳ ಅಧಿನಿಯಮದ ಅನುವುಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ, ಅಧಿನಿಯಮ/ನಿಯಮಗಳ ಅನುವುಗಳನ್ನು ಜಾರಿಗೊಳಿಸುವ ಇಲಾಖೆಯ ಕಾರ್ಯಚಟುವಟಿಕೆಗಳನ್ನು ಚಾಕಚಕ್ಯತೆಯಿಂದ ಕೂಡಿದ ಮಾರ್ಗಗಳಿಗೆ ಮೇಲ್ದರ್ಜೆಗೇರಿಸಲಿಲ್ಲ ಎಂಬುದನ್ನು ಇದು ತೋರಿಸುತ್ತದೆ.

4. 20 ಪ್ರಾದೇಶಿಕ ಸಾರಿಗೆ ಕಚೇರಿಗಳು/ಉಪ–ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ, 5,69,224[4] ಸಾಗಣೆ ವಾಹನಗಳಿಗೆ ಸಂಬಂಧಿಸಿದಂತೆ ಸುಸ್ಥಿತಿ ಪರೀಕ್ಷಣೆಯನ್ನು 2012–13ರಿಂದ 2014–15 ಸಾಲುಗಳಲ್ಲಿ ಮಾಡಲಾಗಿದ್ದಿತು ಎಂಬುದನ್ನು ಗಮನಿಸಲಾಯಿತು. ಯಾವುದೇ ಒಂದು ದಿನದಲ್ಲಿ, ಪ್ರಾದೇಶಿಕ ಸಾರಿಗೆ ಕಚೇರಿಯು ಸಾಗಣೆ ವಾಹನಗಳ ಸುಸ್ಥಿತಿ ಪರೀಕ್ಷಣೆಯನ್ನು ಮಾಡಲು ಕೇವಲ ಓರ್ವ ಏಕೈಕ ಮೋಟಾರು ವಾಹನಗಳ ಪರೀಕ್ಷಕರನ್ನು ನೀಡುವುದು. ಓರ್ವ ಮೋಟಾರು ವಾಹನಗಳ ಪರೀಕ್ಷಕರು ದಿನವೊಂದಕ್ಕೆ ಪರೀಕ್ಷಿಸಿದ ವಾಹನಗಳ ಸರಾಸರಿ ಸಂಖ್ಯೆಯು 138ರವರೆಗೂ ಇದ್ದಿತು. ಇಲಾಖೆಯು ಓರ್ವ ಮೋಟಾರು ವಾಹನಗಳ ಪರೀಕ್ಷಕರು ಒಂದು ದಿನದಲ್ಲಿ ಪರೀಕ್ಷಿಸಬಹುದಾದ ವಾಹನಗಳ ಸಂಖ್ಯೆಯನ್ನು ವಾಸ್ತವಿಕವಾಗಿ ನಿರ್ಧಾರಣೆ ಮಾಡಿರಲಿಲ್ಲವಾದರೂ, ಓರ್ವ ಮೋಟಾರು ವಾಹನಗಳ ಪರೀಕ್ಷಕರಿಗೆ ಪ್ರತಿಯೊಂದು ವಾಹನಕ್ಕೂ ಇದ್ದಂತಹ ಸರಾಸರಿ[5] ಸಮಯವು ಕೇವಲ 15 ನಿಮಿಷಗಳು ಮಾತ್ರ, ಅದು ಮೇಲೆ ತಿಳಿಸಲಾದಂತೆ ವಾಹನವೊಂದಕ್ಕೆ 45 ಪರೀಕ್ಷಣೆಗಳನ್ನು ನಡೆಸಲು ಏನೇನೂ ಸಾಲದು ಎಂಬುದು ಈ ಮೇಲಿನ ವಿವರಗಳಿಂದ ಸ್ಪಷ್ಟಗೊಳ್ಳುತ್ತದೆ.

5. 9,69,706 ಸಾಗಣೆಯೇತರ ವಾಹನಗಳು ನೋಂದಣಿ ಪ್ರಮಾಣಪತ್ರಗಳನ್ನು ನವೀಕರಿಸದಿದ್ದುದು ಹಾಗೂ 7,45,411 ಸಾಗಣೆ ವಾಹನಗಳು ಸುಸ್ಥಿತಿ ಪ್ರಮಾಣಪತ್ರಗಳನ್ನು ನವೀಕರಿಸದಿದ್ದುದು ಅಥವಾ ಬಿಟ್ಟುಬಿಟ್ಟು ನವೀಕರಿಸಿದ್ದುದು, ಮೋಟಾರು ವಾಹನಗಳ ಅಧಿನಿಯಮದ ಅಡಿಯಲ್ಲಿ ಈ ಉದ್ದೇಶಗಳಿಗಾಗಿ ನಿರ್ದಿಷ್ಟಪಡಿಸಲಾಗಿರುವ ಶುಲ್ಕಗಳ ಮೂಲಕ ರಾಜ್ಯದ ವರಮಾನ/ರಾಜಸ್ವವನ್ನು ಅನುಕ್ರಮವಾಗಿ ₹ 8.49 ಕೋಟಿ ಹಾಗೂ ₹ 65.58 ಕೋಟಿ ಮೊತ್ತಗಳಿಂದ ವಂಚಿಸಿದಂತಹ ಹೆಚ್ಚುವರಿ ಪರಿಣಾಮವನ್ನೂ ಸಹ ಹೊಂದಿದ್ದಿತು.

ನಿರ್ಗಮನ ಸಭೆಯಲ್ಲಿ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳನ್ನು ಒಪ್ಪಿಕೊಳ್ಳುವ ವೇಳೆಯಲ್ಲಿಯೇ, ಸಾಗಣೆಯೇತರ ವಾಹನಗಳನ್ನು ನೋಂದಣಿ ದಿನಾಂಕದಿಂದ 15 ವರ್ಷಗಳ ನಂತರ ಪತ್ತೆಹಚ್ಚುವುದು ಕಷ್ಟಸಾಧ್ಯ ಎಂಬುದಾಗಿ ಸರ್ಕಾರ/ಇಲಾಖೆಯು ತಿಳಿಸಿತು. ಸಾಗಣೆ ವಾಹನಗಳಿಗೆ ಸಂಬಂಧಿಸಿದಂತೆ, ಸುಸ್ಥಿತಿ ಪ್ರಮಾಣಪತ್ರಗಳನ್ನು ನವೀಕರಿಸುವ ಜವಾಬ್ದಾರಿಯು ವಾಹನಗಳ ಮಾಲೀಕರದ್ದಾಗಿರುತ್ತದೆ ಹಾಗೂ ಯಾವುದಾದರೂ ವಾಹನವು ಅಧಿಕೃತ ಸುಸ್ಥಿತಿ ಪ್ರಮಾಣಪತ್ರವನ್ನು ಹೊಂದಿರದೆಯೇ ರಸ್ತೆಯಲ್ಲಿ ಚಲಿಸಿದಲ್ಲಿ, ಶಾಸನಬದ್ಧ ಪ್ರಕರಣಗಳನ್ನು ದಾಖಲಿಸಲಾಗುವುದು ಹಾಗೂ ಸೂಕ್ತ ರೀತಿಯಲ್ಲಿ ದಂಡವನ್ನು ವಿಧಿಸುವ ಕ್ರಮವನ್ನು ತೆಗೆದುಕೊಳ್ಳಲಾಗುವುದು ಎಂಬುದಾಗಿ ತಿಳಿಸಿತು. ಇಲಾಖೆಯು, ಆದಾಗ್ಯೂ, ಸುಸ್ಥಿತಿ ಪ್ರಮಾಣಪತ್ರಕ್ಕೆ

[4] ಈ ವಾಹನಗಳು ಏಪ್ರಿಲ್ 2000ಕ್ಕೆ ಮುಂಚಿತವಾಗಿ ನೋಂದಣಿಯಾಗಿದ್ದಂತಹ ವಾಹನಗಳನ್ನೂ ಒಳಗೊಂಡಿದ್ದವು.

[5] ದಿನ ಒಂದಕ್ಕೆ ಕಡೆಯಪಕ್ಷ 8 ಗಂಟೆಗಳ ಕೆಲಸವನ್ನು ಪರಿಗಣಿಸಿದಂತೆ.

ಸಂಬಂಧಿಸಿದಂತೆ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳಲಾಗುವುದು ಹಾಗೂ ಅದನ್ನು ಅನುಸರಿಸಲಾಗುವುದು ಎಂಬುದನ್ನು ಪುನರುಚ್ಚರಿಸಿತು.

**ಶಿಫಾರಸ್ಸು ಸಂಖ್ಯೆ 2: ಇಲಾಖೆಯು ಈ ಕೆಳಗಿನ ಅಂಶಗಳನ್ನು ಪರಿಗಣಿಸಬೇಕು.**

- **ವಾಹನಗಳ ಪ್ರವರ್ಗದ ಆಧಾರದ ಮೇರೆಗೆ ಸುಸ್ಥಿತಿ ಪ್ರಮಾಣಪತ್ರವು ಊರ್ಜಿತಗೊಂಡಿರುವುದನ್ನು ನಿರ್ಧಾರಣೆ ಮಾಡುವುದಕ್ಕಾಗಿ ವಾಹನ (VAHAN) ತಂತ್ರಾಂಶವನ್ನು ಮಾರ್ಪಾಡು ಮಾಡಬೇಕು. ಇತರೆ ಸೇವೆಗಳನ್ನು ಪಡೆಯಲು ಹಾಜರಾಗುವ ವಾಹನಗಳು ಸುಸ್ಥಿತಿ ಪ್ರಮಾಣಪತ್ರಗಳನ್ನು ಪಡೆಯುವಲ್ಲಿ ತಪ್ಪಿತಸ್ತಗೊಂಡಿರುವುದರ ಬಗ್ಗೆ ಸಾರಿಗೆ ಅಧಿಕಾರಿಗಳಿಗೆ ಎಚ್ಚರಿಸುವಂತಹ ನಿಯಂತ್ರಣಗಳನ್ನೂ ಸಹ ಅಳವಡಿಸಬೇಕು.**
- **ಹೆಚ್ಚಿನ ದಕ್ಷತೆ ಮತ್ತು ಪರಿಣಾಮಕಾರಿತ್ವದ ದೃಷ್ಟಿಯಿಂದ ಒಂದು ದಕ್ಷ ರೀತಿಯಲ್ಲಿ ನಡೆಸಿಕೊಂಡು ಹೋಗುವ ಸಲುವಾಗಿ ಸುಸ್ಥಿತಿ ಪರೀಕ್ಷಣೆ ಮತ್ತು ಪ್ರಮಾಣೀಕರಣದ ಕಾರ್ಯಭಾರವನ್ನು ಸುಸ್ಥಿತಿ ಪರೀಕ್ಷಣೆಯನ್ನು ನಡೆಸಲು ಅರ್ಹ ಸಿಬ್ಬಂದಿಯನ್ನು ಹಾಗೂ ಪರೀಕ್ಷಣಾ ಉಪಕರಣಗಳನ್ನು ಹೊಂದಿರುವ ಸೇವಾ ಠಾಣೆಗಳಿಗೆ[6] ಅನುಮತಿಯನ್ನು ನೀಡಬೇಕು.**
- **ನೋಂದಣಿ ಪ್ರಮಾಣಪತ್ರ ಅಥವಾ ಸುಸ್ಥಿತಿ ಪ್ರಮಾಣಪತ್ರದ ನವೀಕರಣ ಮಾಡಿಸಲು ತಪ್ಪಿತಸ್ತವಾಗಿರುವ ವಾಹನಗಳ ವಿವರಗಳನ್ನು ವಾಹನ (VAHAN) ತಂತ್ರಾಂಶದ ಮೂಲಕ ಹೊರತೆಗೆಯಬೇಕು ಹಾಗೂ ವಾಹನ ಚಲನೆಗಳ ನಿಯಂತ್ರಣದಲ್ಲಿ ಸಹಭಾಗಿತ್ವವನ್ನು ಹೊಂದಿರುವ ಎಲ್ಲಾ ಇಲಾಖೆಗಳು ವಾಸ್ತವಿಕ/ಯಥಾರ್ಥ ಸಮಯದಲ್ಲಿ ಇದನ್ನು ಗಮನಿಸುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು.**
- **ಶ್ರವಣ–ವೀಕ್ಷಣ ಮಾಧ್ಯಮ, ಅದರಲ್ಲೂ ಮುಖ್ಯವಾಗಿ ಪ್ರಸ್ತುತ ವಿಸ್ತೃತ ಚಾಚನ್ನು/ಪ್ರಚಲತೆಯನ್ನು ಹೊಂದಿರುವ ಎಫ್‌ಎಂ ರೇಡಿಯೊ ಮೂಲಕ ನೋಂದಣಿ/ಸುಸ್ಥಿತಿ ಪ್ರಮಾಣಪತ್ರಗಳ ಅಗತ್ಯತೆಯ ಬಗ್ಗೆ ಜಾಹೀರಾತನ್ನು ನೀಡುವ ಮೂಲಕ ಸಾರ್ವಜನಿಕರಲ್ಲಿ ಅರಿವನ್ನು ಮೂಡಿಸುವ ಕ್ರಮಗಳನ್ನು ತೆಗೆದುಕೊಳ್ಳಬೇಕು.**

## 5.4.3 ತೆರಿಗೆ ಪಾವತಿಯಲ್ಲಿ ತಪ್ಪಿತಸ್ತರಾದವರ ಪ್ರಕರಣಗಳ ಮೇಲ್ವಿಚಾರಣೆ ಮತ್ತು ಅನುಸರಣಾ ಕ್ರಮಗಳ ಅಸಮರ್ಪಕ ನಿಯಂತ್ರಣಗಳು

ತಗಾದೆ, ವಸೂಲಾತಿ ಮತ್ತು ಬಾಕಿ (ಡಿಸಿಬಿ) ತಃಖ್ತೆಗಳನ್ನು[7] ನಿಯತಕಾಲಿಕವಾಗಿ ತಯಾರಿಸಬೇಕು, ಅವು ತೆರಿಗೆ ಪಾವತಿಯಲ್ಲಿ ತಪ್ಪಿತಸ್ತರಾದವರ ಪ್ರಕರಣಗಳ ಮೇಲೆ ವ್ಯವಸ್ಥಾಪನಾ ಮಾಹಿತಿಯನ್ನು ಒದಗಿಸುತ್ತದೆ ಹಾಗೂ ವಸೂಲಾತಿ ಕಾರ್ಯವಿಧಾನಗಳ ಜೊತೆಯಲ್ಲಿ ಅವುಗಳನ್ನು ಅನುಸರಿಸಲು ಇಲಾಖೆಗೆ ಸಹಾಯಕವಾಗುತ್ತವೆ. ವಾಹನ (VAHAN) ತಂತ್ರಾಂಶದ ತಗಾದೆ, ವಸೂಲಾತಿ ಮತ್ತು ಬಾಕಿ (ಡಿಸಿಬಿ) ಮಾಡ್ಯೂಲನ್ನು ಬಳಸಿಕೊಳ್ಳದಿರುವುದನ್ನು 2011ರಲ್ಲಿ ನಡೆಸಲಾದಂತಹ ಮಾಹಿತಿ ತಂತ್ರಜ್ಞಾನ ಲೆಕ್ಕಪರಿಶೋಧನೆಯಲ್ಲಿ ಸ್ಪಷ್ಟಪಡಿಸಲಾಗಿದ್ದಿತು.

ಹೊಸ ಕಚೇರಿಗಳನ್ನು ಪ್ರಾರಂಭಿಸುವ ಮೂಲಕ ಕೆಲವು ಪ್ರಾದೇಶಿಕ ಸಾರಿಗೆ ಕಚೇರಿಗಳನ್ನು ವಿಭಜಿಸಿದ್ದು, ಎಲ್ಲಾ ಪ್ರಾದೇಶಿಕ ಸಾರಿಗೆ ಕಚೇರಿಗಳು/ಉಪ–ಪ್ರಾದೇಶಿಕ ಸಾರಿಗೆ ಕಚೇರಿಗಳ ಸ್ವಾಮ್ಯತೆಯಿಂದ ಕೂಡಿದ ಮಾಹಿತಿ ಊಡಿಕೆ, ಇತ್ಯಾದಿಗಳ ಕಾರಣ ಕೆಲವು ಸಮಸ್ಯೆಗಳನ್ನು ಎದುರಿಸಲಾಯಿತು ಎಂಬುದಾಗಿ ಸರ್ಕಾರವು ಸೆಪ್ಟಂಬರ್ 2012ರಲ್ಲಿ ಉತ್ತರಿಸಿದ್ದಿತು ಹಾಗೂ ಈ ಸಮಸ್ಯೆಗಳನ್ನು ನಿವಾರಿಸಿದನಂತರ ತಗಾದೆ, ವಸೂಲಾತಿ ಮತ್ತು ಬಾಕಿ (ಡಿಸಿಬಿ) ಮಾಡ್ಯೂಲನ್ನು ಕಾರ್ಯಗತಗೊಳಿಸಲು ಕ್ರಮವನ್ನು ಕೈಗೊಳ್ಳಲಾಗುವುದು ಎಂಬುದಾಗಿ ತಿಳಿಸಿತು.

ಪ್ರಸ್ತುತ ಪರಿಶೀಲನೆಯ ವೇಳೆಯಲ್ಲಿ, 31 ಮಾರ್ಚ್ 2015ರಲ್ಲಿದ್ದಂತೆ, 59 ಪ್ರಾದೇಶಿಕ ಸಾರಿಗೆ ಕಚೇರಿಗಳು/ಉಪ–ಪ್ರಾದೇಶಿಕ ಸಾರಿಗೆ ಕಚೇರಿಗಳ ಪೈಕಿ 24ರಲ್ಲಿ[8] ತಗಾದೆ, ವಸೂಲಾತಿ ಮತ್ತು ಬಾಕಿ (ಡಿಸಿಬಿ) ಮಾಡ್ಯೂಲನ್ನು ಇನ್ನೂ ಬಳಸುತ್ತಿರಲಿಲ್ಲ ಎಂಬುದನ್ನು ಗಮನಿಸಲಾಯಿತು, ಅದು ಚಿಂತಿಸಬೇಕಾದ ವಿಷಯವಾಗಿದೆ.

---

[6] ಸುಸ್ಥಿತಿ ಪರೀಕ್ಷಣೆಗಳನ್ನು ನಡೆಸಲು ಹಾಗೂ ಸುಸ್ಥಿತಿ ಪ್ರಮಾಣಪತ್ರಗಳನ್ನು ನೀಡಲು ಅಧಿಕೃತ ಪರೀಕ್ಷಣಾ ಸ್ಟೇಷನ್ನುಗಳು/ಕೇಂದ್ರಗಳ ಪಟ್ಟಿಯನ್ನು ಪ್ರಕಟಿಸಿ ಅಧಿಸೂಚನೆ ಹೊರಡಿಸಲು ಮೋಟಾರು ವಾಹನಗಳ ಅಧಿನಿಯಮದ ಪರಿಚ್ಛೇದ 56(2) ಅನುವು ಮಾಡಿದೆ.

[7] ತಗಾದೆ, ವಸೂಲಾತಿ ಮತ್ತು ಬಾಕಿ ತಃಖ್ತೆಗಳ ತಯಾರಿಕೆಯು ರಾಜ್ಯಕ್ಕೆ ಬರಬೇಕಾದಂತಹ ತೆರಿಗೆಯು ಬಾಕಿಯಾದಂತೆಲ್ಲಾ ತಾಗದೆಯನ್ನು ಸೃಷ್ಟಿಸುವುದು, ಸಮನ್ವಯಗೊಳಿಸಿದನಂತರ ವಸೂಲಾತಿಯನ್ನು ದಾಖಲಿಸುವುದು ಹಾಗೂ ವಸೂಲಾತಿಯಾಗಬೇಕಾಗಿರುವ ಬಾಕಿಗಳನ್ನು ಲೆಕ್ಕಹಾಕಿ ದಾಖಲಿಸುವುದನ್ನು ಒಳಗೊಂಡಿರುತ್ತದೆ. ಬಾಕಿಗಳ ವಸೂಲಾತಿಗಾಗಿ ತೆಗೆದುಕೊಳ್ಳಲಾದಂತಹ ಕ್ರಮವನ್ನೂ ಸಹ ಪ್ರತಿಯೊಂದು ತಗಾದೆ, ವಸೂಲಾತಿ ಮತ್ತು ಬಾಕಿ ತಃಖ್ತೆಗಳಿಗೂ ನಿರೂಪಿಸತಕ್ಕದ್ದು. ಒಂದು ಸಮರ್ಪಕ ತೆರಿಗೆ ನಿರ್ವಹಣೆಗಾಗಿ ತಗಾದೆ, ವಸೂಲಾತಿ ಮತ್ತು ಬಾಕಿಗಳ ತಃಖ್ತೆಯನ್ನು ತಯಾರಿಸುವಲ್ಲಿ ಮೇಲೆ ಹೇಳಲಾದಂತಹ ಕ್ರಮಗಳ ಜೊತೆಯಲ್ಲಿ ಕಟ್ಟುನಿಟ್ಟಿನ ಅನುಸರಣಾ ಕ್ರಮಗಳು ಅತ್ಯಗತ್ಯವಾಗಿರುತ್ತವೆ.

[8] ಆಟೋರಿಕ್ಷಾ, ಬಾಗಲಕೋಟೆ, ಬಾಲ್ಕಿ, ಬಳ್ಳಾರಿ, ಬಸವಕಲ್ಯಾಣ, ಬೆಳಗಾವಿ, ಚಾಮರಾಜನಗರ, ದಾವಣಗೆರೆ, ಹೊಸಪೇಟೆ, ಹುಣಸೂರು, ಜಮಖಂಡಿ, ಜ್ಞಾನಭಾರತಿ, ಕಾರವಾರ, ಕೋಲಾರ, ಮಡಿಕೇರಿ, ಮಂಡ್ಯ, ಮೈಸೂರು (ಪಶ್ಚಿಮ), ನಾಗಮಂಗಲ, ಪುತ್ತೂರು, ರಾಯಚೂರು, ರಾಮನಗರ, ಸಿರ್ಸಿ, ತಿಪಟೂರು ಹಾಗೂ ಯಾದಗಿರಿ

### 5.4.3.1 ತೆರಿಗೆ ಬಾಕಿಗಳನ್ನು ಪತ್ತೆಹಚ್ಚುವಲ್ಲಿ ಹಾಗೂ ವಸೂಲಾತಿಗಾಗಿ ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳುವಲ್ಲಿನ ವಿಫಲತೆ

ಮಾಡ್ಯೂಲನ್ನು ಬಳಕೆ ಮಾಡುತ್ತಿದ್ದಂತಹ ಪ್ರಾದೇಶಿಕ ಸಾರಿಗೆ ಕಚೇರಿಗಳು/ಉಪ–ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ, ವಾಹನ (VAHAN) ತಂತ್ರಾಂಶದಲ್ಲಿನ ತಗಾದೆ, ವಸೂಲಾತಿ ಮತ್ತು ಬಾಕಿ ತ:ಖ್ತೆಗಳ ಸಂಸ್ಕರಣೆಯು ತಪ್ಪಿನಿಂದ ಕೂಡಿದ್ದಿತು ಹಾಗೂ ಅದು ಸಾಗಣೆ ವಾಹನಗಳಿಂದ ಬಾಕಿಯಿದ್ದಂತಹ ತ್ರೈಮಾಸಿಕ ತೆರಿಗೆಗಳ ಪಾವತಿಯಲ್ಲಿನ ಎಲ್ಲಾ ತಪ್ಪಿತಸ್ತರುಗಳನ್ನು ಪತ್ತೆಹಚ್ಚುವ ಸಾಮರ್ಥ್ಯತೆಯಿಂದ ಕೂಡಿರಲಿಲ್ಲ ಎಂಬುದನ್ನು ವಿಶ್ಲೇಷಣೆಯು ತೋರಿಸಿಕೊಟ್ಟಿತು. ಉದಾಹರಣೆಗೆ, ತ್ರೈಮಾಸಿಕ ತೆರಿಗೆ ಪಾವತಿಯನ್ನು ಸ್ಥಗಿತಗೊಳಿಸಿದ್ದಂತಹ 68,653[9] ಸಾಗಣೆ ವಾಹನಗಳಿಗೆ ಸಂಬಂಧಿಸಿದಂತೆ ತಗಾದೆ, ವಸೂಲಾತಿ ಮತ್ತು ಬಾಕಿ ಟೇಬಲ್ಲುಗಳಲ್ಲಿ ಯಾವುದೇ ಊಡಿಕೆಗಳೂ ಕಂಡುಬರಲಿಲ್ಲ. ತಗಾದೆ, ವಸೂಲಾತಿ ಮತ್ತು ಬಾಕಿ ತ:ಖ್ತೆಗಳಲ್ಲಿ ಊಡಿಕೆಗಳ ಅನುಪಸ್ಥಿಯಲ್ಲಿ, ಈ ಪ್ರಕರಣಗಳಲ್ಲಿ ರಾಜಸ್ವ/ವರಮಾನ್ದ ಬಾಕಿಗಳ ಅನುಸರಣಾ ಕ್ರಮಗಳು ಸಾಧ್ಯವಾಗುವುದಿಲ್ಲ.

ಈ ವಾಹನಗಳಿಗೆ ಸಂಬಂಧಿಸಿದಂತೆ, 31 ಮಾರ್ಚ್ 2015ರಲ್ಲಿದ್ದಂತೆ 1ರಿಂದ 19 ತ್ರೈಮಾಸಿಕ ತೆರಿಗೆ ಪಾವತಿಗಳನ್ನು ಮಾಡಿರಲಿಲ್ಲ ಹಾಗೂ ಬಾಕಿಯಿದ್ದಂತಹ ಒಟ್ಟಾರೆ ರಾಜಸ್ವ/ವರಮಾನವು ₹ 141.65 ಕೋಟಿ ಆಗಿದ್ದಿತು.

ವಾಹನ (VAHAN) ತಂತ್ರಾಂಶ ಅನ್ವಯದಲ್ಲಿನ ತಪ್ಪುಗಳಿಂದ ಕೂಡಿದ್ದಂತಹ ಸಂಸ್ಕರಣಾ ನಿಯಂತ್ರಣಗಳು ಈ ಕೆಳಗಿನ ಲೋಪದೋಷಗಳಲ್ಲಿಯೂ ಪರಿಣಮಿಸಿದ್ದವು:

1. ರಾಜ್ಯದಲ್ಲಿನ ಇತರೆ ಪ್ರಾದೇಶಿಕ ಸಾರಿಗೆ ಕಚೇರಿಗಳು/ಉಪ–ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ಮಾಡಲಾದ ತೆರಿಗೆ ಪಾವತಿಗಳನ್ನು ಮೂಲ ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿರಲಿಲ್ಲ. 2010–11ರಿಂದ 2014–15ರಲ್ಲಿ, ತೆರಿಗೆಯನ್ನು ಈಗಾಗಲೇ ಪಾವತಿಸಿದ್ದಂತಹ ಅವಧಿಗೆ, ತಗಾದೆ, ವಸೂಲಾತಿ ಮತ್ತು ಬಾಕಿ ಟೇಬಲ್ಲಿನಲ್ಲಿ 676 ವಾಹನಗಳನ್ನು ತೆರಿಗೆ ಪಾವತಿಯಿಂದ ತಪ್ಪಿತಸ್ತವಾಗಿರುವವುಗಳು ಎಂಬುದಾಗಿ ನಮೂದಿಸಲಾಗಿದ್ದಿತು. ವಾಹನ (VAHAN) ತಂತ್ರಾಂಶ ವ್ಯವಸ್ಥೆಯು ತಗಾದೆ, ವಸೂಲಾತಿ ಮತ್ತು ಬಾಕಿ ತ:ಖ್ತೆಗಳನ್ನು ಹೊರತೆಗೆಯುವ ವೇಳೆಯಲ್ಲಿ ಬಳಕೆ ಮಾಡುತ್ತಿಲ್ಲ ಎಂಬ ಪ್ರಮಾಣಪತ್ರವನ್ನು ನೀಡಿದ್ದರ ಆಧಾರದ ಮೇರೆಗೆ ತೆರಿಗೆ ಪಾವತಿಯಿಂದ ವಿನಾಯಿತಿಯನ್ನು ಹೊಂದಿರುವ ವಾಹನಗಳನ್ನು ಹೊರಗಿಡುವುದಿಲ್ಲ ಎಂಬುದನ್ನೂ ಸಹ ಗಮನಿಸಲಾಯಿತು. ಈ ತಪ್ಪುಗಳು ಬಾಕಿಗಳನ್ನು ಅಧಿಕ ಪ್ರಮಾಣದಲ್ಲಿ ತಿಳಿಸುವಲ್ಲಿ ಪರಿಣಮಿಸಿದ್ದಿತು. ಈ ಅಂಶವನ್ನು 'ಸಾರಿಗೆ ಇಲಾಖೆಯ ಗಣಕೀಕರಣ'ದ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯಲ್ಲಿಯೂ ಸ್ಪಷ್ಟಪಡಿಸಲಾಗಿದ್ದಿತು, ಇಲಾಖೆಯ ಎಲ್ಲಾ ಕಚೇರಿಗಳನ್ನೂ ಗಣಕೀಕರಣಗೊಳಿಸಲಾಗುವುದು ಎಂಬುದಾಗಿ ಇಲಾಖೆಯು ಸೆಪ್ಟಂಬರ್ 2012ರಲ್ಲಿ ಉತ್ತರಿಸಿದ್ದಿತು. ಆದಾಗ್ಯೂ, ಅದನ್ನು ನವಂಬರ್ 2015ರಲ್ಲಿಯೂ ಕಾರ್ಯಗತಗೊಳಿಸಿರಲಿಲ್ಲ.

2. ತಗಾದೆ, ವಸೂಲಾತಿ ಮತ್ತು ಬಾಕಿ ಟೇಬಲ್ಲುಗಳಲ್ಲಿನ 15.67 ಲಕ್ಷ ದಾಖಲೆಗಳ ಪೈಕಿ, 8.58 ಲಕ್ಷ ದಾಖಲೆಗಳು (ಶೇಕಡಾ 54.75) ಮುಂದಿನ ಅವಧಿಗಳಿಗೆ ಬಾಕಿಗಳನ್ನು ತೋರಿಸುತ್ತಿದ್ದವು. ಆದ್ದರಿಂದ, ಹೊರತೆಗೆಯಲಾಗಿದ್ದಂತಹ ಅಂಕಿಸಂಖ್ಯೆಗಳು ಕಚೇರಿಯಲ್ಲಿನ ಬಾಕಿಗಳ ಸ್ಥಿತಿಗತಿಗಳ ಒಂದು ವಾಸ್ತವಿಕ ಚಿತ್ರಣವನ್ನು ಪ್ರತಿನಿಧಿಸುತ್ತಿರಲಿಲ್ಲ.

3. ವಾಹನ (VAHAN) ತಂತ್ರಾಂಶದ ಮೂಲಕ ಹೊರತೆಗೆಯಲಾದಂತಹ ತಗಾದೆ, ವಸೂಲಾತಿ ಮತ್ತು ಬಾಕಿಗಳ ತ:ಖ್ತೆಗಳು ತೆರಿಗೆ ಪಾವತಿಯಿಂದ ತಪ್ಪಿತಸ್ತರಾದವರಿಂದ ದಂಡ[10] ವಸೂಲಾತಿಗೆ ತಗಾದೆಯನ್ನು ಸೃಷ್ಟಿಸಲು ಅನುವನ್ನು ಹೊಂದಿರಲಿಲ್ಲ. ತತ್ಪರಿಣಾಮವಾಗಿ, ಏಪ್ರಿಲ್ 2010 ಹಾಗೂ ಮಾರ್ಚ್ 2015ರ ನಡುವಿನ ಅವಧಿಯಲ್ಲಿ ₹47.40 ಕೋಟಿ ಮೊತ್ತದಷ್ಟು ತ್ರೈಮಾಸಿಕ ತೆರಿಗೆಯನ್ನು ಪಾವತಿಸುವಲ್ಲಿ ತಪ್ಪಿತಸ್ತಗೊಂಡಿದ್ದಂತಹ 39,194 ವಾಹನಗಳಿಂದ ದಂಡವನ್ನು ವಸೂಲಾತಿ ಮಾಡುವಲ್ಲಿ ಲೋಪದೋಷಗಳಾಗಿದ್ದವು.. ಈ ಪ್ರಕರಣಗಳಲ್ಲಿ ದಂಡವನ್ನು ವಿಧಿಸದಿದ್ದುದು ₹ 9.48 ಕೋಟಿ ಮೊತ್ತದಷ್ಟು ಆಗಿದ್ದಿತು.

ಅಧಿನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ದಿನಾಂಕಗಳ ನಂತರ ₹ 129.64 ಕೋಟಿ ಮೊತ್ತದಷ್ಟು ತೆರಿಗೆಯನ್ನು ಪಾವತಿಸಿದ್ದಂತಹ 1,23,716 ವಾಹನಗಳಿಗೆ ಸಂಬಂಧಿಸಿದಂತೆ, ಪ್ರಾದೇಶಿಕ ಸಾರಿಗೆ

[9] ಆಕ್ಷೇಪಣಾರಹಿತ ಪ್ರಮಾಣಪತ್ರ/ಸಿಸಿ ಆಧಾರದ ಮೇರೆಗೆ ಹೊರಹೋಗಿರುವ ವಾಹನಗಳು, ಬಳಕೆಯಾಗದಿರುವುದರ ಅಡಿಯಲ್ಲಿ ವಾಹನಗಳ ದಾಖಲೆಗಳನ್ನು ಒಪ್ಪಿಸಿದ್ದ ಕಾರಣ ವಿನಾಯಿತಿಯನ್ನು ಕೋರಿದ್ದುದು, ಇತರ ಯಾವುದೇ ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ತೆರಿಗೆಯನ್ನು ಪಾವತಿಸಿರುವುದು, ಇತ್ಯಾದಿ ಅಂಶಗಳನ್ನು ಪರಿಗಣಿಸಿ ಈ ವಾಹನಗಳ ಪಟ್ಟಿಯನ್ನು ತಯಾರಿಸಲಾಯಿತು.

[10] ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿಯಮಗಳು, 1957ರ ನಿಯಮ 29(1)ರ ಅಡಿಯಲ್ಲಿ ಹಣವನ್ನು ಪಾವತಿಸುವ ಮೂಲಕ ತಪ್ಪುಗಳನ್ನು ಸಂಯೋಜಿಸಿಕೊಳ್ಳಲು ಕರ್ನಾಟಕ ಮೋಟಾರು ವಾಹನಗಳ ಅಧಿನಿಯಮ, 1957ರ ಪರಿಚ್ಛೇದ 12–ಬಿ ಅನುವು ಮಾಡಿದೆ, ಅದು ತೆರಿಗೆ ಪಾವತಿಯಲ್ಲಿ ತಪ್ಪಿತಸ್ತವಾದಲ್ಲಿ ತ್ರೈಮಾಸಿಕ ತೆರಿಗೆಯ ಶೇಕಡಾ 20ರಷ್ಟು ಮೊತ್ತದ ದಂಡ ಪಾವತಿಯನ್ನು ನಿರ್ದಿಷ್ಟಪಡಿಸಿದೆ.

ಕಚೇರಿಗಳು/ಉಪ-ಪ್ರಾದೇಶಿಕ ಸಾರಿಗೆ ಕಚೇರಿಗಳು ₹ 7.78 ಕೋಟಿ ಮೊತ್ತದಷ್ಟು ದಂಡವನ್ನು ವಿಧಿಸಿದ್ದವು ಎಂಬುದನ್ನೂ ಸಹ ದತ್ತ/ಮಾಹಿತಿಯ ವಿಶ್ಲೇಷಣೆಯು ತೋರಿಸಿಕೊಟ್ಟಿತು. ಈ ಪ್ರಕರಣಗಳಲ್ಲಿ ವಾಸ್ತವಿಕವಾಗಿ ವಸೂಲಾತಿ ಮಾಡಬೇಕಿದ್ದಂತಹ ದಂಡದ ಮೊತ್ತವು ₹ 25.93 ಕೋಟಿ ಆಗಿದ್ದಿತು. ಈ ರೀತಿಯಾಗಿ, ಕಡಿಮೆ ಪ್ರಮಾಣದಲ್ಲಿ ವಿಧಿಸಲಾಗಿದ್ದಂತಹ ದಂಡದ ಮೊತ್ತವು ₹ 18.15 ಕೋಟಿ ಆಗಿದ್ದಿತು.

4. 2010-11ರಿಂದ 2014-15ರಲ್ಲಿ ಹೊರತೆಗೆಯಲಾಗಿದ್ದಂತಹ ತಗಾದೆ, ವಸೂಲಾತಿ ಮತ್ತು ಬಾಕಿ ತ:ಖ್ತೆಗಳು ಟೇಬಲ್ಲುಗಳಲ್ಲಿ ಪ್ರಾರಂಭಿಕ ಮತ್ತು ಅಂತಿಮ ಶಿಲ್ಕುಗಳಲ್ಲಿನ ನಕಾರಾತ್ಮಕ ಅಂಕಿಸಂಖ್ಯೆಗಳ ಕಾರಣ ₹ 8.73 ಕೋಟಿ ಮೊತ್ತದಷ್ಟು ನಕಾರಾತ್ಮಕ ಬಾಕಿಗಳನ್ನು ಒಳಗೊಂಡಂತೆ 12,093 ದಾಖಲೆಗಳನ್ನು ಒಳಗೊಂಡಿದ್ದವು.

ಲೆಕ್ಕಪರಿಶೋಧನಾ ವಿಶ್ಲೇಷಣೆಯಲ್ಲಿ ಗಮನಿಸಲಾದಂತೆ, ಯಾವುದೇ ವಾಹನಗಳು ಅವಿರತವಾಗಿ ಅನೇಕ ತ್ರೈಮಾಸಿಕಗಳಿಗೆ ತೆರಿಗೆ ಪಾವತಿಯಿಂದ ತಪ್ಪಿತಸ್ತವಾಗಿದ್ದಂತಹ ಸಂದರ್ಭದಲ್ಲಿ ಆ ವಾಹನದಿಂದ ಬಾಕಿ ಇರುವ ಒಟ್ಟಾರೆ ಬಾಕಿಯನ್ನು ದಾಖಲಿಸುವ ಬದಲಾಗಿ, ತಗಾದೆ, ವಸೂಲಾತಿ ಮತ್ತು ಬಾಕಿ ತ:ಖ್ತೆಯಲ್ಲಿ ತಪ್ಪಿತಸ್ತಗೊಂಡಿರುವ ಮೊದಲ ತ್ರೈಮಾಸಿಕಕ್ಕೆ ಬಾಕಿಯಿರುವ ತೆರಿಗೆಯನ್ನು ಮಾತ್ರ ದಾಖಲಿಸಿದ್ದುದು ಇದಕ್ಕೆ ಕಾರಣವಾಗಿದ್ದಿತು. ತತ್ಪರಿಣಾಮವಾಗಿ, ಒಂದು ತ್ರೈಮಾಸಿಕಕ್ಕೂ ಮೀರಿದಂತೆ ತಪ್ಪಿತಸ್ತಗೊಂಡಿರುವ ಒಂದು ವಾಹನವು ಒಟ್ಟಾರೆ ಬಾಕಿಗಳ ಕಡೆಗೆ ಪಾವತಿಯನ್ನು ಅಥವಾ ಒಂದು ತ್ರೈಮಾಸಿಕದ ತೆರಿಗೆಯನ್ನು ಮೀರಿದಂತಹ ಇತರ ಯಾವುದೇ ಮೊತ್ತವನ್ನು ಮಾಡಿದಲ್ಲಿ ಬಾಕಿಗಳ ನಿವ್ವಳ ಅಂತಿಮ ಶಿಲ್ಕು ಒಂದು ನಕಾರಾತ್ಮಕ ಸಂಖ್ಯೆಯಾಗುತ್ತದೆ. ಈ ಮಾಹಿತಿಯು ಒಂದು ನಿರ್ದಿಷ್ಟ ವಾಹನಕ್ಕೆ ಸಂಬಂಧಿಸಿದಂತೆ ತಪ್ಪು ಮಾಹಿತಿಯನ್ನು (ಬಾಕಿಯಿರುವ ತೆರಿಗೆಯ ನಿಖರವಾದ ಮೊತ್ತವನ್ನು ತೋರಿಸದಿರುವುದರ ಮೂಲಕ) ನೀಡುವುದಲ್ಲದೇ, ನಕಾರಾತ್ಮಕ ಮೊತ್ತವು ಪ್ರಾದೇಶಿಕ ಸಾರಿಗೆ ಕಚೇರಿಗೆ ಸಂಬಂಧಿಸಿದಂತೆ ಒಟ್ಟಾರೆಯಾಗಿ ಬಾಕಿಗಳನ್ನು ಕೂಡಿದಾಗ ಒಟ್ಟಾರೆ ಮೊತ್ತದ ಮೇಲೆ ಪರಿಣಾಮವನ್ನು ಭೀರುತ್ತದೆ. ಇದರ ಕಾರಣ, ಪ್ರಾದೇಶಿಕ ಸಾರಿಗೆ ಕಚೇರಿಯ ಒಟ್ಟಾರೆ ಬಾಕಿಗಳು ಕಡಿಮೆ ಪ್ರಮಾಣದಲ್ಲಿ ತಿಳಿಸಲ್ಪಡುತ್ತವೆ.

ಸಾರಿಗೆ ಇಲಾಖೆಯ ಆಯುಕ್ತರವರು 8 ಏಪ್ರಿಲ್ 1986ರಂದು ನೀಡಿದ್ದಂತಹ ಒಂದು ಸುತ್ತೋಲೆಯ[11] ಅನುಸಾರ ಇಲಾಖೆಯು ಏಪ್ರಿಲ್ 1986ರಿಂದಲೂ ತಗಾದೆ, ವಸೂಲಾತಿ ಮತ್ತು ಬಾಕಿ ತ:ಖ್ತೆಯಲ್ಲಿ ಒಂದು ತ್ರೈಮಾಸಿಕದ ತೆರಿಗೆಯನ್ನು ಮಾತ್ರ ತೋರಿಸುವ ಕ್ರಮವನ್ನು ಅನುಸರಿಸುತ್ತಾ ಬಂದಿದೆ.

ಈ ಸುತ್ತೋಲೆಯಲ್ಲಿ, ಕೆಲವು ಸಮಯದವರೆಗೆ ವಾಹನಗಳು ನಿಯತಕಾಲಿಕವಾಗಿ ತೆರಿಗೆ ಪಾವತಿಯನ್ನು ಮಾಡಿದ್ದು ಹಾಗೂ ತದನಂತರ ತೆರಿಗೆ ಪಾವತಿಯನ್ನು ಸ್ಥಗಿತಗೊಳಿಸಿದ್ದಲ್ಲಿ, ಲೆಕ್ಕಪತ್ರಗಳ ಉದ್ದೇಶಕ್ಕಾಗಿ ತಗಾದೆಯನ್ನು ಒಂದು ತ್ರೈಮಾಸಿಕಕ್ಕೆ ಅಥವಾ ಒಂದು ವರ್ಷಕ್ಕೆ, ಯಾವುದು ಅನ್ವಯವೋ ಅದಕ್ಕೆ ಸೀಮಿತಗೊಳಿಸಬೇಕು ಎಂಬುದಾಗಿ ಆಯುಕ್ತರವರು ನಿರ್ದೇಶಿಸಿದ್ದರು. ವಾಹನಗಳನ್ನು ಉಪಯೋಗಕ್ಕೆ ಬಾರದವುಗಳೆಂಬುದಾಗಿ ಘೋಷಿಸಲಾಗಿರುವುದು ಅಥವಾ ರಾಜ್ಯದಿಂದ ಹೊರಕ್ಕೆ ಹೋಗಿರುವುದು, ಇತ್ಯಾದಿಗಳ ಬಗ್ಗೆ ಮಾಹಿತಿಯ ಕೊರತೆ ಮುಂತಾದ ವಿವಿಧ ಕಾರಣಗಳಿಂದ ಬಾಕಿಗಳನ್ನು ಅಧಿಕ ಪ್ರಮಾಣದಲ್ಲಿ ತೋರಿಸುವುದನ್ನು ತಪ್ಪಿಸುವುದಕ್ಕಾಗಿ ಈ ನಿರ್ಣಯವನ್ನು ತೆಗೆದುಕೊಳ್ಳಲಾಗಿದ್ದಿತು.

ಅದೇ ಕಾರಣಗಳು, ಆದಾಗ್ಯೂ, ಪ್ರಸ್ತುತ ಸನ್ನಿವೇಶಕ್ಕೆ ಅದರಲ್ಲೂ ವಿಶೇಷವಾಗಿ ಇಲಾಖೆಯು ಸಂಪೂರ್ಣವಾಗಿ ಗಣಕೀಕೃತ ವಾತಾವರಣಕ್ಕೆ ಬದಲಾವಣೆಗೊಂಡಂತಹ 2009ರ ನಂತರ ಅಂಕೀಯ/ಡಿಜಿಟಲ್ ನಮೂನೆಯಲ್ಲಿ ಮಾಹಿತಿಯು ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳ ನಡುವೆ ಲಭ್ಯವಾಗುವುದರಿಂದ ಅನ್ವಯಗೊಳ್ಳುವುದಿಲ್ಲ. ಆದ್ದರಿಂದ, ಹೊರತೆಗೆಯಲಾಗಿದ್ದಂತಹ ತಗಾದೆ, ವಸೂಲಾತಿ ಮತ್ತು ಬಾಕಿ ತ:ಖ್ತೆಗಳು ವಿಶ್ವಸನೀಯವಾಗಿಲ್ಲ ಹಾಗೂ ರಾಜಸ್ವ/ವರಮಾನದ ಬಾಕಿಗಳ ಯಥಾರ್ಥತೆಯಿಂದ ಕೂಡಿದ ಸ್ಥಿತಿಗತಿಗಳನ್ನು ತೋರಿಸುವುದಿಲ್ಲ.

ತೆರಿಗೆ ಪಾವತಿಯಿಂದ ತಪ್ಪಿತಸ್ತವಾಗಿರುವ ವಾಹನಗಳಿಂದ ಬಾಕಿಗಳ ಒಟ್ಟಾರೆ ಮೊತ್ತಕ್ಕೆ ಪ್ರತಿಯಾಗಿ ತಗಾದೆ, ವಸೂಲಾತಿ ಮತ್ತು ಬಾಕಿ ತ:ಖ್ತೆಯಲ್ಲಿ ಒಂದು ತ್ರೈಮಾಸಿಕದ ತೆರಿಗೆಯನ್ನು ದಾಖಲಿಸುವುದು ಬಾಕಿಗಳ ಯಥಾರ್ಥತೆಯಿಂದ ಕೂಡಿದ ಸ್ಥಿತಿಗತಿಯನ್ನು ಒದಗಿಸುವುದಿಲ್ಲ ಮತ್ತು ಆದ್ದರಿಂದ 1986ರ ಸುತ್ತೋಲೆಯನ್ನು ಹಿಂಪಡೆಯಬೇಕು ಹಾಗೂ ಸರಿಯಾದ ಕಾರ್ಯವಿಧಾನವನ್ನು ಅನುಸರಿಸಬೇಕು ಎಂಬುದನ್ನು ಸರ್ಕಾರವು ನಿರ್ಗಮನ ಸಭೆಯಲ್ಲಿ ಒಪ್ಪಿಕೊಂಡಿತು.

**ಶಿಫಾರಸು ಸಂಖ್ಯೆ 3: ತಗಾದೆ, ವಸೂಲಾತಿ ಮತ್ತು ಬಾಕಿ ತ:ಖ್ತೆಗಳು ಪ್ರತಿಯೊಂದು ಪ್ರಾದೇಶಿಕ ಕಚೇರಿಯ ಹಾಗೂ ಒಟ್ಟಾರೆಯಾಗಿ ಇಲಾಖೆಯ ಬಾಕಿಗಳ ಸ್ಥಿತಿಗತಿಗಳನ್ನು ಸತ್ಯಾಸತ್ಯತೆಯಿಂದ ಕೂಡಿದ ಹಾಗೂ ನ್ಯಾಯಸಮ್ಮತ ಅಭಿಪ್ರಾಯವನ್ನು ವ್ಯಕ್ತಪಡಿಸುವ ರೀತಿಯಲ್ಲಿ ರಾಜ್ಯ ಸರ್ಕಾರಕ್ಕೆ ತೆರಿಗೆ ಮೊತ್ತವನ್ನು ಪಾವತಿಸಬೇಕಾದ ಅವಧಿಯು ಬಂದಂತೆಲ್ಲಾ ಎಲ್ಲಾ ವಾಹನಗಳಿಂದಲೂ ತೆರಿಗೆ ಪಾವತಿಗಾಗಿ ತಗಾದೆಯನ್ನು ಸೃಷ್ಟಿಸುವ ಹಾಗೂ ಅದನ್ನು ಮುಂದಿನ**

[11] ಸುತ್ತೋಲೆ ಸಂಖ್ಯೆ ಸಿಟಿ/ಡಿಸಿಬಿ/ಪಿಆರ್-125/85.6 ದಿನಾಂಕ 8.4.1986

**ನಿಯತಕಾಲಿಕ ಬಾಕಿಗಳ ಜೊತೆಯಲ್ಲಿ ಇಂದಿನದನ್ನಾಗಿ ಮಾಡುವ ರೀತಿಯಲ್ಲಿ ವಾಹನ (VAHAN) ತಂತ್ರಾಂಶ ವ್ಯವಸ್ಥೆಯನ್ನು ಮಾರ್ಪಾಡು ಮಾಡಲು ಇಲಾಖೆಯು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು.**

## 5.4.3.2 ಸಾಗಣೆ ವಾಹನಗಳಿಂದ ಬಿಟ್ಟುಹೋಗಿರುವ/ಕಾಣೆಯಾಗಿರುವ ತ್ರೈಮಾಸಿಕ ತೆರಿಗೆ ಪಾವತಿಗಳನ್ನು ಕಂಡುಹಿಡಿಯದಿದ್ದುದು

59 ಪ್ರಾದೇಶಿಕ ಸಾರಿಗೆ ಕಚೇರಿಗಳು/ಉಪ–ಪ್ರಾದೇಶಿಕ ಸಾರಿಗೆ ಕಚೇರಿಗಳು ಅಥವಾ ರಾಜ್ಯದ ಸೀಮೆಯಲ್ಲಿರುವ 15 ತನಿಖಾ ಠಾಣೆಗಳ ಪೈಕಿ ಎಲ್ಲಿಯೇ ಆದರೂ ತ್ರೈಮಾಸಿಕ ತೆರಿಗೆಯನ್ನು ಪಾವತಿ ಮಾಡಲು ಸಾಗಣೆ ವಾಹನಗಳ ಮಾಲೀಕರುಗಳಿಗೆ ಅನುಮತಿಯನ್ನು ನೀಡಲಾಗಿದೆ. ಸಾರ್ವಜನಿಕರಿಗೆ ಅದು ಇಲಾಖೆಯಿಂದ ಒಂದು ಉತ್ತಮ ಅನುಕೂಲತೆಯಾಗಿದೆ. ಆದರೆ ತೆರಿಗೆ ಪಾವತಿಯನ್ನು ನಿರಂತರವಾಗಿ ಪಾವತಿಸುತ್ತಿರುವುದನ್ನು ಖಚಿತಪಡಿಸುವ ಅಥವಾ ತಪ್ಪಿತಸ್ಥಗೊಂಡಿರುವುದನ್ನು ಪತ್ತೆಹಚ್ಚುವ ರೀತಿಯಲ್ಲಿ ಈ ಅನುಕೂಲತೆಯು ಒಂದು ಸರ್ವರಿನಲ್ಲಿ ರಾಜ್ಯದ ಎಲ್ಲಿಯೇ ಆದರೂ ಮಾಡಲಾದಂತಹ ಪಾವತಿಗಳ ವಿವರಗಳನ್ನು ಸೆರೆಹಿಡಿಯಬಲ್ಲಂತಹ ಒಂದು ಅನುಕಲಿತ ವ್ಯವಸ್ಥೆಯ ಅಗತ್ಯತೆಯನ್ನು ಹೊಂದಿದೆ. ಜೂನ್ 2015ರಲ್ಲಿದ್ದಂತೆ, ಇಲಾಖೆಯು ಒಂದು ಅನುಕಲಿತ ವ್ಯವಸ್ಥೆಯನ್ನು ಹೊಂದಿರಲಿಲ್ಲ, ಆದರೆ ಎಲ್ಲಾ ಪ್ರಾದೇಶಿಕ ಸಾರಿಗೆ ಕಚೇರಿಗಳು/ತನಿಖಾ ಠಾಣೆಗಳು ಮಾಹಿತಿಯನ್ನು ಹಂಚಿಕೊಳ್ಳುವಲ್ಲಿ ಅಂತರ–ಸಂಪರ್ಕವನ್ನೂ ಹೊಂದಿರದ ವಿತರಿಸಲ್ಪಟ್ಟ ಅಂತರಜಾಲ ವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು.

ಸಾರಿಗೆ ವಾಹನಗಳು ನಿಯತಕಾಲಿಕವಾಗಿ ತ್ರೈಮಾಸಿಕ ತೆರಿಗೆ ಪಾವತಿ ಮಾಡುತ್ತಿರುವುದನ್ನು ಹಾಗೂ ಪಾವತಿಸಲಾಗಿರುವ ತೆರಿಗೆಯು ನಿರ್ದಿಷ್ಟ ದರಗಳಲ್ಲಿರುವುದನ್ನು ಹಾಗೂ ಇಲಾಖೆಯಲ್ಲಿ ಸಮರ್ಪಕ ನಿಯಂತ್ರಣಗಳು ಇರುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಎಲ್ಲಾ 59 ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ಕಾರ್ಯಾಚರಣೆಯಲ್ಲಿದ್ದಂಥ ಐದು[12] ಪ್ರವರ್ಗಗಳ ಅಡಿಯಲ್ಲಿನ ಸಾರಿಗೆ ವಾಹನಗಳ ತ್ರೈಮಾಸಿಕ ತೆರಿಗೆ ಪಾವತಿ ವಿವರಗಳನ್ನು ಪರೀಕ್ಷಿಸಲಾಯಿತು.

ತ್ರೈಮಾಸಿಕ ತೆರಿಗೆಗಳನ್ನು ಅವಿರತವಾಗಿ ಹಾಗೂ ನಿರ್ದಿಷ್ಟ ದರಗಳಲ್ಲಿ ಪಾವತಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಇಲಾಖೆಯಲ್ಲಿ ಸಮರ್ಪಕ ನಿಯಂತ್ರಣಗಳು ಇರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯಲ್ಲಿ ಮಾಡಲಾದಂತಹ ವಿಶ್ಲೇಷಣೆಯು ತೋರಿಸಿಕೊಟ್ಟಿತು.

1. 22,002 ಸಾರಿಗೆ ವಾಹನಗಳು (3,90,832ರ ಪೈಕಿ ಶೇಕಡಾ 5.63) ಒಂದರಿಂದ 16 ತ್ರೈಮಾಸಿಕಗಳವರೆವಿಗೂ ತೆರಿಗೆ ಪಾವತಿಯಿಂದ ತಪ್ಪಿಸಿಕೊಂಡಿದ್ದವು ಹಾಗೂ 1 ಏಪ್ರಿಲ್ 2010 ಮತ್ತು 31 ಮಾರ್ಚ್ 2015ರ ಮಧ್ಯಂತರ ಅಥವಾ ಇತ್ತೀಚಿನ ತ್ರೈಮಾಸಿಕಗಳಿಗೆ ತೆರಿಗೆ ಪಾವತಿಯನ್ನು ಒಪ್ಪಿಕೊಳ್ಳಲಾಗಿದ್ದಿತು ಎಂಬುದನ್ನು ಗಮನಿಸಲಾಯಿತು. ಇಲಾಖೆಯೂ ಸಹ ಅದನ್ನು ಕಂಡುಹಿಡಿಯುವಲ್ಲಿ ಹಾಗೂ ತಗಾದೆ, ವಸೂಲಾತಿ ಮತ್ತು ಬಾಕಿ ತ:ಖ್ತೆಗಳ ಮೂಲಕ ತಗಾದೆಯನ್ನು ಸೃಷ್ಟಿಸುವಲ್ಲಿ ವಿಫಲಗೊಂಡಿದ್ದಿತು. ಈ ಪ್ರಕರಣಗಳಲ್ಲಿ ಬಾಕಿಯಿದ್ದಂತಹ ಒಟ್ಟಾರೆ ತೆರಿಗೆ ಮೊತ್ತವು ₹ 45.31 ಕೋಟಿ ಆಗಿದ್ದಿತು. ಅಲ್ಲದೇ, ₹ 9.06 ಕೋಟಿ ಮೊತ್ತದಷ್ಟು ದಂಡವನ್ನು ಕಡ್ಡಾಯವಾಗಿ ವಿಧಿಸಬೇಕಿದ್ದಿತು.
2. ಅಲ್ಲದೇ, ಅದೇ ಅವಧಿಯಲ್ಲಿ 4,575 (ಶೇಕಡಾ 1.17) ಸಾರಿಗೆ ವಾಹನಗಳಿಂದ ₹ 2.71 ಕೋಟಿ ಮೊತ್ತದಷ್ಟು ತ್ರೈಮಾಸಿಕ ತೆರಿಗೆಯನ್ನು ಕಡಿಮೆ ಪ್ರಮಾಣದಲ್ಲಿ ಪಾವತಿಸಲ್ಪಟ್ಟಿದ್ದಿತು ಎಂಬುದನ್ನು 44 ಪ್ರಾದೇಶಿಕ ಸಾರಿಗೆ ಕಚೇರಿಗಳು/ಉಪ–ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ[13] ಗಮನಿಸಲಾಯಿತು. ವಸೂಲಾತಿಯಾಗಿದ್ದಂತಹ ತ್ರೈಮಾಸಿಕ ತೆರಿಗೆ ಮೊತ್ತವು ವಾಸ್ತವಿಕವಾಗಿ ಬಾಕಿಯಿದ್ದಂತಹ ತೆರಿಗೆ ಮೊತ್ತಕ್ಕಿಂತ ಕಡಿಮೆಯಾಗಿದ್ದಿತಾದರೂ ಸಂಬಂಧಿತ ಪ್ರಾದೇಶಿಕ ಸಾರಿಗೆ ಕಚೇರಿಗಳು/ಸಹಾಯಕ ಪ್ರಾದೇಶಿಕ ಸಾರಿಗೆ ಕಚೇರಿಗಳು ವ್ಯತ್ಯಾಸದ ತೆರಿಗೆ ಮೊತ್ತಕ್ಕೆ ತಗಾದೆಯನ್ನು ಸೃಷ್ಟಿಸಿರಲಿಲ್ಲ.

ಈ ರೀತಿಯಾಗಿ, ಬಿಟ್ಟುಹೋಗಿರುವ/ಕಾಣೆಯಾಗಿರುವ ತ್ರೈಮಾಸಿಕ ತೆರಿಗೆ ಪಾವತಿಗಳನ್ನು ಪತ್ತೆಹಚ್ಚುವ ಹಾಗೂ ಸೂಕ್ತ ಕ್ರಮದೊಂದಿಗೆ ಅವುಗಳನ್ನು ಅನುಸರಿಸುವ ಸಲುವಾಗಿ ಪರಿಣಾಮಕಾರಿಯಾದಂತಹ ನಿಯಂತ್ರಣವು ಇರಲಿಲ್ಲ. ಕೇಂದ್ರೀಕೃತ ಜಾಲತಾಣ ವ್ಯವಸ್ಥೆಯ ಅನುಪಸ್ಥಿತಿಯಲ್ಲಿ, ಇಲಾಖೆಯು ಕಡೆಯಪಕ್ಷ ವಾಹನವು ನೋಂದಣಿಯಾಗಿರುವ ಪ್ರಾದೇಶಿಕ ಸಾರಿಗೆ ಕಚೇರಿಗೆ ತೆರಿಗೆಯನ್ನು ಪಾವತಿಸಲಾಗಿರುವ ಪ್ರಾದೇಶಿಕ ಸಾರಿಗೆ

[12] ಎಚ್‌ಪಿವಿ, ಎಂಪಿವಿ, ಎಲ್‌ಪಿವಿ, ಎಚ್‌ಜಿವಿ ಹಾಗೂ ಎಂಜಿವಿ

[13] ಬಸವಕಲ್ಯಾಣ, ಬಳ್ಳಾರಿ, ಬೆಳಗಾವಿ, ಬೆಂಗಳೂರು (ಕೇಂದ್ರ), ಬೆಂಗಳೂರು (ಪಶ್ಚಿಮ), ಬೆಂಗಳೂರು (ಪೂರ್ವ), ಬೆಂಗಳೂರು (ಉತ್ತರ), ಬೆಂಗಳೂರು (ದಕ್ಷಿಣ), ಬೀದರ್, ಭಾಲ್ಕಿ, ಚಿಕ್ಕಬಳ್ಳಾಪುರ, ಚಿಕ್ಕೋಡಿ, ಚಿತ್ರದುರ್ಗ, ದಾವಣಗೆರೆ, ದೇವನಹಳ್ಳಿ, ಧಾರವಾಡ, ಇಲೆಕ್ಟ್ರಾನಿಕ್ಸ್ ಸಿಟಿ, ಗದಗ, ಹಾಸನ, ಹೊನ್ನಾವರ, ಹೊಸಪೇಟೆ, ಹುಣಸೂರು, ಕಲಬುರ್ಗಿ, ಕೋಲಾರ, ಕೊಪ್ಪಳ, ಕೆಜಿಎಫ್, ಕೆಆರ್ ಪುರಂ, ಮಧುಗಿರಿ, ಮಡಿಕೇರಿ, ಮಂಗಳೂರು, ಮಂಡ್ಯ, ಮೈಸೂರು ಪೂರ್ವ, ಮೈಸೂರು ಪಶ್ಚಿಮ, ನಾಗಮಂಗಲ, ನೆಲಮಂಗಲ, ಪುತ್ತೂರು, ರಾಯಚೂರು, ಜ್ಞಾನಭಾರತಿ, ಸಾಗರ, ಸಕಲೇಶಪುರ, ತುಮಕೂರು, ವಿಜಯಪುರ, ಯಲಹಂಕ ಹಾಗೂ ಯಾದಗಿರಿ.

ಕಚೇರಿ/ಉಪ–ಪ್ರಾದೇಶಿಕ ಸಾರಿಗೆ ಕಚೇರಿಯಿಂದ ಮಾಹಿತಿಯನ್ನು ಆಮದು ಮಾಡಿಕೊಳ್ಳುವ ವ್ಯವಸ್ಥೆಯ ಬಗ್ಗೆ ಚಿಂತಿಸಬಹುದಿದ್ದಿತು. ಪ್ರಸ್ತುತ ಸ್ಥಿತಿಗತಿಯ ಪ್ರಕಾರ, ಅಂತಹ ಮಾಹಿತಿ ಆಮದನ್ನು ಮಾಡಿಕೊಳ್ಳುತ್ತಿಲ್ಲ, ಇದು ಮಧ್ಯಂತರ ತ್ರೈಮಾಸಿಕಗಳಿಗೆ/ಅವಧಿಗಳಿಗೆ ತೆರಿಗೆ ಪಾವತಿಯಿಂದ ತಪ್ಪಿಸಿಕೊಳ್ಳುವ ಸಾಧ್ಯತೆಗೆ ದಾರಿಮಾಡಿಕೊಟ್ಟಿದೆ.

ವಾಹನ ಮಾಲೀಕರು ಮೂಲ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲದ ಇತರೆ ಪ್ರಾದೇಶಿಕ ಸಾರಿಗೆ ಕಚೇರಿಗಳು/ಉಪ–ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ಮಾಡಲಾಗಿರುವ ಪಾವತಿಗಳು ಎರಡು ವಿವಿಧ ಟೇಬಲ್ಲುಗಳಲ್ಲಿ ದಾಖಲಾಗಲ್ಪಡುತ್ತಿವೆ. ಒಂದೇ ಉದ್ದೇಶಕ್ಕಾಗಿ ಎರಡು ವಿವಿಧ ಟೇಬಲ್ಲುಗಳನ್ನು ಹೊಂದಿರುವುದಕ್ಕೆ ಕಾರಣವು ಕಂಡುಬರುತ್ತಿಲ್ಲ. ಇದು ಪಾವತಿಯ ಜಾಡನ್ನು ಹಿಡಿಯುವಲ್ಲಿ ಹಾಗೂ ಮಾಹಿತಿಯನ್ನು ಮೂಲ ಪ್ರಾದೇಶಿಕ ಸಾರಿಗೆ ಕಚೇರಿ/ಉಪ–ಪ್ರಾದೇಶಿಕ ಸಾರಿಗೆ ಕಚೇರಿಗೆ ಮಾಹಿತಿಯ ಆಮದನ್ನು ಮಾಡಿಕೊಳ್ಳುವಲ್ಲಿನ ಸಮಸ್ಯೆಗಳನ್ನು ಹೆಚ್ಚಿಸುತ್ತದೆ.

ತೆರಿಗೆ ಪಾವತಿಯಿಂದ ತಪ್ಪಿಸಿಕೊಳ್ಳದೆಯೇ ಹಾಗೂ ಸೂಕ್ತ ದರದಲ್ಲಿ ನಿಯತಕಾಲಿಕವಾಗಿ ತ್ರೈಮಾಸಿಕ ತೆರಿಗೆ ಪಾವತಿಯನ್ನು ಖಚಿತಪಡಿಸಿಕೊಳ್ಳುವುದಕ್ಕೆ ತೆರಿಗೆ ಕಾರ್ಡಿನ[14] ಸಮರ್ಪಕ ನಿರ್ವಹಣೆ ಹಾಗೂ ತೆರಿಗೆ ಪಾವತಿಯ ವೇಳೆಯಲ್ಲಿ ತೆರಿಗೆ ಕಾರ್ಡನ್ನು ಒದಗಿಸುವಂತೆ ವಾಹನದ ಮಾಲೀಕರನ್ನು ಇಲಾಖೆಯು ಒತ್ತಾಯಿಸುವುದು ಸೂಕ್ತ ನಿಯಂತ್ರಣವಾಗುತ್ತದೆ.

ವಾಹನ (VAHAN) ತಂತ್ರಾಂಶದ ಹೊಸ ಅವತರಣಿಕೆಯಲ್ಲಿ ಸಾಗಣೆ ವಾಹನಗಳಿಗೆ ಸಂಬಂಧಿಸಿದಂತೆ ತ್ರೈಮಾಸಿಕ ತೆರಿಗೆ ಪಾವತಿಯ ಮಾಹಿತಿಯನ್ನು ಕ್ರೋಡೀಕರಣಗೊಳಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ ಎಂಬುದಾಗಿ ಸರ್ಕಾರ/ಇಲಾಖೆಯು ನಿರ್ಗಮನ ಸಭೆಯಲ್ಲಿ ತಿಳಿಸಿತು. ತಗಾದೆ, ವಸೂಲಾತಿ ಮತ್ತು ಬಾಕಿ ತ:ಖ್ತೆಗಳು ತೆರಿಗೆ ಬಾಕಿಗಳ ಒಂದು ಸತ್ಯಾಸತ್ಯತೆಯಿಂದ ಹಾಗೂ ನ್ಯಾಯಸಮ್ಮತತೆಯಿಂದ ಕೂಡಿದ ಸ್ಥಿತಿಗತಿಯನ್ನು ಪ್ರತಿಬಿಂಭಿಸುವ ರೀತಿಯಲ್ಲಿ, ತೆರಿಗೆ ಪಾವತಿಯು ಬಾಕಿಯಾದಂತೆಲ್ಲಾ ವಾಹನ ಮಾಲೀಕರಿಂದ ತೆರಿಗೆ ಪಾವತಿಗೆ ಒತ್ತಾಯಿಸಿ ತಗಾದೆಯನ್ನು ಸೃಷ್ಟಿಸುವ, ಮುಂದಿನ ನಿಯತಕಾಲಿಕ ಬಾಕಿಗಳ ಜೊತೆ ಇಂದಿನದನ್ನಾಗಿ ಮಾಡುವ ರೀತಿಯಲ್ಲಿ ವಾಹನ (VAHAN) ತಂತ್ರಾಂಶ ವ್ಯವಸ್ಥೆಯನ್ನು ಮಾರ್ಪಾಡು ಮಾಡಲು ಸರ್ಕಾರ/ಇಲಾಖೆಯು ಒಪ್ಪಿಕೊಂಡಿತು.

**ಶಿಫಾರಸು ಸಂಖ್ಯೆ 4: ಇಲಾಖೆಯು ಕೇಂದ್ರೀಕೃತ ದತ್ತಸಂಚಯ ಜಾಲತಾಣ ತಂತ್ರಾಂಶ ವ್ಯವಸ್ಥೆಗೆ ಬದಲಾವಣೆಗೊಳ್ಳಬೇಕು ಹಾಗೂ ಅಲ್ಲದೇ ರಾಜ್ಯದಲ್ಲಿ ಯಾವುದೇ ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ತೆರಿಗೆಯನ್ನು ವಸೂಲಾತಿ ಮಾಡುವ ಸಮಯದಲ್ಲಿ ಸಾಗಣೆ ವಾಹನಗಳಿಗೆ ಸಂಬಂಧಿಸಿದಂತೆ ತ್ರೈಮಾಸಿಕ ತೆರಿಗೆಯನ್ನು ಯಾವ ದಿನಾಂಕದವರೆವಿಗೆ ಪಾವತಿಸಲಾಗಿದೆ, ವಾಹನಕ್ಕೆ ನಿಗಧಿಗೊಳಿಸಲಾಗಿರುವ ತ್ರೈಮಾಸಿಕ ತೆರಿಗೆಯ ವಾಸ್ತವಿಕ ಮೊತ್ತ, ಇತ್ಯಾದಿ ಎಲ್ಲಾ ಸಂಬಂಧಿತ ಮಾಹಿತಿಯನ್ನು ಅರಿತುಕೊಳ್ಳುವುದಕ್ಕಾಗಿ ಸ್ಮಾರ್ಟ್ ತೆರಿಗೆ ಕಾರ್ಡುಗಳನ್ನು ಪರಿಚಯಿಸಬೇಕು.**

### 5.4.3.3 ಸಾಗಣೆ ವಾಹನಗಳಿಗೆ ತೆರಿಗೆ ವಿನಾಯಿತಿಗಳನ್ನು[15] ತಪ್ಪಾಗಿ ನೀಡಿದ್ದುದು

ಏಪ್ರಿಲ್ 2010 ಹಾಗೂ ಮಾರ್ಚ್ 2015ರ ನಡುವಿನ ಅವಧಿಯಲ್ಲಿ ಸಾಗಣೆ ವಾಹನಗಳಿಗೆ ನೀಡಲಾಗಿದ್ದಂತಹ ವಿನಾಯಿತಿಗಳು ಕರ್ನಾಟಕ ಮೋಟಾರು ವಾಹನಗಳ ಅಧಿನಿಯಮದ ಅನುವುಗಳ ಅನುಸಾರವಾಗಿದ್ದವೆ ಹಾಗೂ ವಿನಾಯಿತಿಯ ಅವಧಿಯನಂತರ ತೆರಿಗೆ ವಸೂಲಾತಿಗಾಗಿ ಕ್ರಮಗಳನ್ನು ಕೈಗೊಳ್ಳಲಾಯಿತೆ ಅಥವಾ ನೋಂದಣಿ ಪ್ರಮಾಣಪತ್ರಗಳನ್ನು ರದ್ದುಗೊಳಿಸಲಾಗಿದ್ದವೆ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ವಾಹನಗಳನ್ನು ಬಳಸದಿದ್ದಂತಹ ಅವಧಿಗೆ ಬಳಸಿಕೊಂಡಿದ್ದಂತಹ ತೆರಿಗೆ ವಿನಾಯಿತಿಯ ವಿಶ್ಲೇಷಣೆಯನ್ನು ಮಾಡಲಾಯಿತು. ನಿರ್ದಿಷ್ಟ ದಾಖಲೆಗಳನ್ನು ಸಂಗ್ರಹಿಸಿದನಂತರ ವಿನಾಯಿತಿಗಳನ್ನು ನೀಡಲಾಗಿದ್ದಿತು, ಆದರೆ ಅಂತಹ ವಿನಾಯಿತಿಗಳ ಅವಧಿಗಳನ್ನು ಅಧಿನಿಯಮದ ಅನುವುಗಳ ಪ್ರಕಾರ ನಿರ್ಬಂಧಿಸಲಾಗಿರುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ನಿಯಂತ್ರಣಗಳು ಇರುವುದಿಲ್ಲ, ಅಂದರೆ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಒಂದು ವರ್ಷ ಹಾಗೂ ಒಂದು ಸಲಕ್ಕೆ ಅವಿರತವಾಗಿ ಮೂರು ವಷಗಳವರೆಗೆ ವಿಸ್ತರಿಸಬಹುದು. ಅಲ್ಲದೇ, 'ಬಳಸದೇ ಇರುವುದಕ್ಕೆ' ಸಂಬಂಧಿತ ಅರ್ಜಿಗಳನ್ನು ತಿರಸ್ಕರಿಸಿರಬಹುದಾದಂತಹ ಪ್ರಕರಣಗಳಿಗೆ ಸಂಬಂಧಿಸಿದಂತೆ

---

[14] ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ರ ಪರಿಚ್ಛೇದ 5ರ ಅಡಿಯಲ್ಲಿ, ಒಂದು ಮೋಟಾರು ವಾಹನಕ್ಕೆ ಸಂಬಂಧಿಸಿದಂತೆ ತೆರಿಗೆಯನ್ನು ವಿಧಿಸಿದಾಗ, ತೆರಿಗೆಯನ್ನು ವಿಧಿಸುವ ಅಧಿಕಾರಿಯು ತೆರಿಗೆಯನ್ನು ಪಾವತಿಸುವ ವ್ಯಕ್ತಿಗೆ (ಎ) ನಿರ್ದಿಷ್ಟ ನಮೂನೆಯಲ್ಲಿ ಪಾವತಿಸಲಾಗಿರುವ ತೆರಿಗೆಯ ಮೊತ್ತ,ವನ್ನು ಸೂಚಿಸಿ ಒಂದು ರಸೀದಿಯನ್ನು ನೀಡತಕ್ಕದ್ದು ಹಾಗೂ (ಬಿ) ಒಂದು ನಿರ್ದಿಷ್ಟ ನಮೂನೆಯಲ್ಲಿ ತೆರಿಗೆಯನ್ನು ಯಾವ ದರದಲ್ಲಿ ವಿಧಿಸಬೇಕು ಹಾಗೂ ಯಾವ ಅವಧಿಗೆ ತೆರಿಗೆಯನ್ನು ಪಾವತಿಸಲಾಗಿದೆ ಎಂಬುದನ್ನು ಸೂಚಿಸಿ ಒಂದು ತೆರಿಗೆ ಕಾರ್ಡನ್ನು ನೀಡತಕ್ಕದ್ದು.

[15] ದಿನಾಂಕ 6–9–2007ರ ಅಧಿಸೂಚನೆಯ ಮೂಲಕ, ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯದಲ್ಲಿ ನೋಂದಣಿಯಾಗಿರುವ ಹಾಗೂ ರಸ್ತೆಗಳಲ್ಲಿ ಬಳಸುತ್ತಿರದ ವಾಹನಗಳಿಗೆ ಮೇಲೆ ತಿಳಿಸಲಾದಂತಹ ಅಧಿನಿಯಮದ ಅಡಿಯಲ್ಲಿ ಒಂದು ತ್ರೈಮಾಸಿಕ, ಅರ್ಧ ವಾರ್ಷಿಕ ಅಥವಾ ಒಂದು ವರ್ಷ, ಯಾವುದು ಅನ್ವಯವೋ ಆ ಅವಧಿಗೆ ತೆರಿಗೆ ಪಾವತಿಯಿಂದ ವಿನಾಯಿತಿಯನ್ನು ನೀಡಿತು. ವಾಹನದ ಮಾಲೀಕರುಗಳು ನೋಂದಣಿ ಪ್ರಮಾಣಪತ್ರ, ಪರ್ಮಿಟ್ಟು ಹಾಗೂ ಸುಸ್ಥಿತಿ ಪ್ರಮಾಣಪತ್ರಗಳನ್ನು ನೋಂದಣಿ ಅಧಿಕಾರಿಗಳಿಗೆ ಒಪ್ಪಿಸುವ ಅಗತ್ಯತೆಯಿದೆ. ಬಳಕೆಯಾಗದಿರುವ ಅವಧಿಯು ಒಂದು ಬಾರಿಗೆ ಮೂರು ವರ್ಷಗಳನ್ನು ಮೀರಬಾರದು. ತದನಂತರ ನೋಂದಣಿ ಅಧಿಕಾರಿಗಳು ನೋಂದಣಿಯನ್ನು ರದ್ದುಗೊಳಿಸಲು ಕ್ರಮಗಳನ್ನು ಕೈಗೊಳ್ಳಬಹುದು.

ವಾಹನ (VAHAN) ತಂತ್ರಾಂಶ ಅನ್ವಯದಲ್ಲಿ ಯಾವುದೇ ಮಾಹಿತಿಯೂ ಇರಲಿಲ್ಲ. 2010–11 ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಪ್ರಕಟವಾಗಿದ್ದಂತಹ 'ಸಾರಿಗೆ ಇಲಾಖೆಯ ಗಣಕೀಕರಣ'ದ ಮೇಲೆ ಮಾಹಿತಿ ತಂತ್ರಜ್ಞಾನ ಲೆಕ್ಕಪರಿಶೋಧನೆಯಲ್ಲಿ ಬಿಟ್ಟುಕೊಡಲಾಗಿದ್ದಂತಹ/ಒಪ್ಪಿಸಿಬಿಡಲಾಗಿದ್ದಂತಹ ವಾಹನಗಳ ಮಾಡ್ಯೂಲನ್ನು ಇಲಾಖೆಯು ನವೆಂಬರ್ 2011ರಲ್ಲಿದ್ದಂತೆ ಬಳಸಿಕೊಂಡಿರಲಿಲ್ಲ ಎಂಬುದಾಗಿ ವಿಶ್ಲೇಷಿಸಲಾಗಿದ್ದಿತು (ಕಂಡಿಕೆ 4.7.8.3). ಬಿಟ್ಟುಕೊಡಲಾಗಿದ್ದಂತಹ/ಒಪ್ಪಿಸಿಬಿಡಲಾಗಿದ್ದಂತಹ ವಾಹನಗಳ ಬಗ್ಗೆ ಮಾಹಿತಿಯನ್ನು ದಾಖಲಿಸುವ ಸಲುವಾಗಿ ವಾಹನ (VAHAN) ತಂತ್ರಾಂಶ ಅನ್ವಯದಲ್ಲಿ ಅನುವನ್ನು ಮಾಡಲಾಗಿದೆ ಹಾಗೂ ಈ ಮಾಡ್ಯೂಲನ್ನು ಬಳಸುವ ಸಲುವಾಗಿ ಇಲಾಖೆಯ ಅಧಿಕಾರಿಗಳಿಗೆ ತರಬೇತಿಯನ್ನೂ ನೀಡಲಾಗಿದೆ ಎಂಬುದಾಗಿ ಸರ್ಕಾರವು ಉತ್ತರಿಸಿದ್ದಿತು. ಈ ನಿಟ್ಟಿನಲ್ಲಿ ಗಮನಿಸಲಾದಂತಹ ಅಂಶಗಳನ್ನು ಈ ಕೆಳಗೆ ತಿಳಿಸಲಾಗಿದೆ:

1. 45 ಪ್ರಾದೇಶಿಕ ಸಾರಿಗೆ ಕಚೇರಿಗಳು/ಉಪ–ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ[16], 7,226 ವಾಹನ ಮಾಲೀಕರು ವಾಹನಗಳು ಬಳಕೆಯಾಗದೇ ನಿಂತಿರುವುದಕ್ಕಾಗಿ ಅರ್ಜಿಯನ್ನು ಸಲ್ಲಿಸಿದರು ಹಾಗೂ ಅದಕ್ಕಾಗಿ 31 ಮಾರ್ಚ್ 2015ರಲ್ಲಿದ್ದಂತೆ ಶುಲ್ಕವನ್ನು ಪಾವತಿಸಿದರು. ಇವುಗಳ ಪೈಕಿ, ಕೇವಲ 4,961 ವಾಹನಗಳು ಮಾತ್ರ ವಾಹನ (VAHAN) ತಂತ್ರಾಂಶ ಅನ್ವಯದ ಬಿಟ್ಟುಕೊಡಲಾಗಿದ್ದಂತಹ/ಒಪ್ಪಿಸಿಬಿಡಲಾಗಿದ್ದಂತಹ ಟೇಬಲ್ಲಿನಲ್ಲಿ ಕಂಡುಬಂದವು. ಉಳಿದ ವಾಹನಗಳಿಗೆ ಸಂಬಂಧಿಸಿದಂತೆ ಬಳಕೆಯಾಗದೇ ನಿಂತಿರುವುದಕ್ಕಾಗಿ ಸಲ್ಲಿಸಲಾಗಿದ್ದಂತಹ ಅರ್ಜಿಗಳು ತಿರಸ್ಕರಿಸಲ್ಪಟ್ಟುವೆ ಅಥವಾ ವಾಹನ (VAHAN) ತಂತ್ರಾಂಶ ಅನ್ವಯದ ಹೊರಗೆ ಸಂಸ್ಕರಿಸಲ್ಪಟ್ಟಿದ್ದವೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರಲಿಲ್ಲ.
2. ಏಪ್ರಿಲ್ 2010 ಹಾಗೂ ಮಾರ್ಚ್ 2015ರ ನಡುವೆ, 1,423 ವಾಹನಗಳಿಗೆ ಬಳಕೆಯಾಗದೇ ನಿಂತಿರುವ ವಾಹನಗಳ ಅಡಿಯಲ್ಲಿ ವಿನಾಯಿತಿಯನ್ನು ನೀಡಲಾಗಿದ್ದಿತು. ಇವುಗಳ ಪೈಕಿ 75 ವಾಹನಗಳನ್ನು ಮಾತ್ರ ತದನಂತರ ಬಿಡುಗಡೆಗೊಳಿಸಲಾಗಿದ್ದಿತು. ಉಳಿದ 1,348 ವಾಹನಗಳನ್ನು ಅವುಗಳ ಮಾಲೀಕರು ಬಿಡುಗಡೆ ಮಾಡಿಸಿಕೊಂಡಿರಲಿಲ್ಲ. ಇವುಗಳ ಪೈಕಿ, 366 ವಾಹನಗಳು ಮೂರು ವರ್ಷಗಳಿಗೂ ಮೀರಿದಂತೆ ಬಳಕೆಯಾಗದೇ ಉಳಿದಿರುವುದರ ಅಡಿಯಲ್ಲಿರುವುದು ಕಂಡುಬಂದಿತು. ಆದಾಗ್ಯೂ, ಈ ಪ್ರಕರಣಗಳಲ್ಲಿ ನೋಂದಣೀ ಪ್ರಮಾಣಪತ್ರಗಳನ್ನು ರದ್ದುಗೊಳಿಸಲು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಯಾವುದೇ ಕ್ರಮವನ್ನೂ ತೆಗೆದುಕೊಂಡಿರಲಿಲ್ಲ.
3. ಏಪ್ರಿಲ್ 2010 ಹಾಗೂ ಮಾರ್ಚ್ 2015ರ ನಡುವಿನ ಅವಧಿಯಲ್ಲಿ ಬಿಡುಗಡೆಗೊಳಿಸಲಾಗಿದ್ದಂತಹ 458 ವಾಹನಗಳಿಗೆ ಸಂಬಂಧಿಸಿದಂತೆ ಬಿಡುಗಡೆ ಟೇಬಲ್ಲಿನಲ್ಲಿ 1–4–2010ರನಂತರ ಬಿಟ್ಟುಕೊಡಬೇಕಾದವು/ಒಪ್ಪಿಸಿಬಿಡಬೇಕಾದವು ಎಂಬುದಾಗಿ ತಿಳಿಸಲಾಗಿದ್ದಿತು ಎಂಬುದನ್ನೂ ಸಹ ಗಮನಿಸಲಾಯಿತು. ಆದಾಗ್ಯೂ, ವಿನಾಯಿತಿಯನ್ನು ನೀಡಿದ್ದರ ಬಗ್ಗೆ ವಿನಾಯಿತಿಯನ್ನು ನೀಡುವುದಕ್ಕೆ ಸಂಬಂಧಿತ ಟೇಬಲ್ಲಿನಲ್ಲಿ ಅನುಗುಣವಾದ ದಾಖಲೆಯು ಇರಲಿಲ್ಲ, ಇದು ವಾಹನ (VAHAN) ತಂತ್ರಾಂಶ ಅನ್ವಯದಲ್ಲಿನ ತಪ್ಪು ಸಂಸ್ಕರಣೆಗಳನ್ನು ಸೂಚಿಸುತ್ತಿದ್ದಿತು.

ಬಳಕೆಯಾಗದೇ ಉಳಿದಿರುವ ಅವಧಿಗೆ ವಿನಾಯಿತಿಯನ್ನು ಕೋರಿದ್ದಂತಹ ವಾಹನಗಳಿಗೆ ಸಂಬಂಧಿಸಿದಂತೆ ಅಪೂರ್ಣ ದತ್ತಸಂಚಯವನ್ನು ದೃಷ್ಟಿಯಲ್ಲಿಟ್ಟುಕೊಂಡು, 15 ಪ್ರಾದೇಶಿಕ ಸಾರಿಗೆ ಕಚೇರಿಗಳು/ಉಪ–ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ[17] ಕೈಯಿಂದ ನಿರ್ವಹಿಸಿದ್ದಂತಹ ದಾಖಲೆಗಳನ್ನು ಲೆಕ್ಕಪರಿಶೋಧನೆಯು ಪರೀಕ್ಷಾ–ಪರಿಶೀಲನೆ ಮಾಡಿತು ಹಾಗೂ 1966–67ರಿಂದಲೂ, 2991 ವಾಹನಗಳನ್ನು ಬಳಕೆಯಾಗದೇ ಉಳಿದಿರುವ ವಾಹನಗಳ ಅಡಿಯಲ್ಲಿ ಇಡಲಾಗಿದ್ದಿತು ಎಂಬುದನ್ನು ಗಮನಿಸಿತು. ಮೂರು ವರ್ಷಗಳಿಗೂ ಮೀರಿದಂತೆ ಬಳಕೆಯಾಗದೇ ಉಳಿದಿರುವವುಗಳ ಅಡಿಯಲ್ಲಿನ ವಾಹನಗಳ ನೋಂದಣಿಯನ್ನು ರದ್ದುಗೊಳಿಸಲು ಇಲಾಖೆಯು ಯಾವ ಕ್ರಮವನ್ನೂ ತೆಗೆದುಕೊಂಡಿರಲಿಲ್ಲ.

ಮೂಲಮಾಹಿತಿ ಹಾಗೂ ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ನಿರ್ವಹಿಸಿದ್ದಂತಹ ದಾಖಲೆಗಳ ವಿಶ್ಲೇಷಣೆಯು, ಅರ್ಜಿದಾರರು ಬಳಕೆಯಾಗದಿರುವ ಅವಧಿಯನ್ನು ನವೀಕರಿಸುವಂತೆ ಇಲಾಖೆಯು ಒತ್ತಾಯಪಡಿಸಿರಲಿಲ್ಲ ಎಂಬುದನ್ನೂ ತೋರಿಸಿಕೊಟ್ಟಿತು. ಸರ್ಕಾರ/ಇಲಾಖೆಯು ಈ ನಿಟ್ಟಿನಲ್ಲಿ ಉತ್ತರವನ್ನು ನೀಡಿಲ್ಲ (ನವಂಬರ್ 2015).

---

[16] ಬಳ್ಳಾರಿ, ಬೆಳಗಾವಿ, ಬೆಂಗಳೂರು (ಕೇಂದ್ರ), ಬೆಂಗಳೂರು (ಪಶ್ಚಿಮ), ಬೆಂಗಳೂರು (ಪೂರ್ವ), ಬೆಂಗಳೂರು (ಉತ್ತರ), ಬೆಂಗಳೂರು (ದಕ್ಷಿಣ), ಬಿದರೆ, ಭಾಲ್ಕಿ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕೋಡಿ, ಚಿತ್ರದುರ್ಗ, ದಾವಣಗೆರೆ, ದೇವನಹಳ್ಳಿ, ಧಾರವಾಡ, ಇಲೆಕ್ಟ್ರಾನಿಕ್ಸ್ ಸಿಟಿ, ಗದಗ, ಹಾಸನ, ಹೊನ್ನಾವರ, ಹೊಸಪೇಟೆ, ಹುಣಸೂರು, ಜ್ಞಾನಭಾರತಿ, ಕಲಬುರ್ಗಿ, ಕೊಪ್ಪಳ, ಕೆ.ಜಿ.ಎಫ್, ಕೆ.ಆರ್.ಪುರಂ, ಮಧುಗಿರಿ, ಮಡಿಕೇರಿ, ಮಂಗಳೂರು, ಮಂಡ್ಯ, ಮೈಸೂರು (ಪೂರ್ವ), ಮೈಸೂರು (ಪಶ್ಚಿಮ), ನಾಗಮಂಗಲ, ನೆಲಮಂಗಲ, ಪುತ್ತೂರು, ರಾಯಚೂರು, ಸಾಗರ, ಸಕಲೇಶಪುರ, ತುಮಕೂರು, ವಿಜಯಪುರ, ಯಲಹಂಕ, ಹಾಗೂ ಯಾದಗಿರಿ.

[17] ಬೆಂಗಳೂರು (ಕೇಂದ್ರ), ಬೆಂಗಳೂರು (ಪೂರ್ವ), ಭಾಲ್ಕಿ, ಇಲೆಕ್ಟ್ರಾನಿಕ್ಸ್ ಸಿಟಿ, ಗದಗ, ಕಲಬುರ್ಗಿ, ಹೊಸಪೇಟೆ, ಹುಣಸೂರು, ಕೊಪ್ಪಳ, ಕೆ.ಆರ್. ಪುರಂ, ಮಧುಗಿರಿ, ಮೈಸೂರು (ಪಶ್ಚಿಮ), ರಾಯಚೂರು, ಸಾಗರ ಹಾಗೂ ಯಲಹಂಕ.

## 5.4.4 ಸಾಗಣೆಯೇತರ ಹಾಗೂ ನಿರ್ಮಾಣ ಉಪಕರಣ ವಾಹನಗಳ ಮೇಲೆ ಜೀವಿತಾವಧಿ ತೆರಿಗೆ ತಗಾದೆಯನ್ನು ಸೃಷ್ಟಿಸದಿದ್ದುದು ಹಾಗೂ ವಸೂಲಾತಿ ಮಾಡದಿದ್ದುದು.

ಸಾಗಣೆಯೇತರ ವಾಹನಗಳು ಹಾಗೂ ನಿರ್ಮಾಣ ಉಪಕರಣ ವಾಹನಗಳ[18] ಇನ್ವಾಯ್ಸ್ ದರದ ಮೇಲೆ ಜೀವಿತಾವಧಿ ತೆರಿಗೆಯನ್ನು ವಿಧಿಸತಕ್ಕದ್ದು. ಯಥಾರ್ಥತೆಯಿಂದ ಕೂಡಿರದ ಇನ್ವಾಯ್ಸು ದರಕ್ಕೆ ಅಥವಾ ನೋಂದಣಿ ಟೇಬಲ್ಲಿನಲ್ಲಿ ಇನ್ವಾಯ್ಸು ದರವನ್ನು ಸೆರೆಹಿಡಿಯದಿರುವಲ್ಲಿಗೆ ದಾರಿ ಮಾಡಿಕೊಟ್ಟಿದ್ದಂತಹ ಪ್ರತಿಯೊಂದು ನೋಂದಾಯಿತ ವಾಹನದ ಇನ್ವಾಯ್ಸು ದರದ ವಿವರಗಳನ್ನು ಸೆರೆಹಿಡಿಯುವಲ್ಲಿನ ವಾಹನ (VAHAN) ತಂತ್ರಾಂಶ ಅನ್ವಯದಲ್ಲಿನ ವಿನ್ಯಾಸ ಲೋಪದೋಷಗಳನ್ನು (2010–11 ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಪ್ರಕಟವಾಗಿದ್ದಂತಹ) 'ಸಾರಿಗೆ ಇಲಾಖೆಯ ಗಣಕೀಕರಣ'ದ ಮೇಲಿನ ಮಾಹಿತಿ ತಂತ್ರಜ್ಞಾನ ಲೆಕ್ಕಪರಿಶೋಧನೆಯಲ್ಲಿ ಸ್ಪಷ್ಟಪಡಿಸಲಾಗಿದ್ದಿತು. ವಿನಾಯಿತಿ ಅವಧಿಯು ಮುಕ್ತಾಯಗೊಂಡನಂತರ ತೆರಿಗೆ ವಸೂಲಾತಿಗೆ ವಾಹನ (VAHAN) ತಂತ್ರಾಂಶ ಅನ್ವಯವು ಪ್ರೇರೇಪಣೆಯನ್ನು ಮಾಡುತ್ತಿರಲಿಲ್ಲ ಎಂಬುದನ್ನೂ ಸಹ ವರದಿ ಮಾಡಲಾಗಿದ್ದಿತು.

ಸಮಸ್ಯೆಯನ್ನು ಸರಿಪಡಿಸುವುದಕ್ಕಾಗಿ ವಿಷಯವನ್ನು ಎನ್ಐಸಿಗೆ ಸೂಚಿಸಲಾಗಿದೆ ಎಂಬುದಾಗಿ ಸರ್ಕಾರವು ಸೆಪ್ಟಂಬರ್ 2012ರಲ್ಲಿ ತನ್ನ ಉತ್ತರದಲ್ಲಿ ತಿಳಿಸಿದ್ದಿತು.

ವಾಹನ (VAHAN) ದತ್ತಸಂಚಯದ ಲೆಕ್ಕಪರಿಶೋಧನಾ ವಿಶ್ಲೇಷಣೆಯು, ಆದಾಗ್ಯೂ, 31 ಮಾರ್ಚ್ 2015ರಲ್ಲಿದ್ದಂತೆ ಮೇಲೆ ತಿಳಿಸಲಾದ ಸಮಸ್ಯೆಯನ್ನು ಪರಿಹರಿಸಲು ವ್ಯವಸ್ಥೆಯಲ್ಲಿ ಯಾವುದೇ ಅಭಿವೃದ್ಧಿಯನ್ನೂ ಕಾರ್ಯಗತಗೊಳಿಸಿರಲಿಲ್ಲ ಎಂಬುದನ್ನು ತೋರಿಸಿಕೊಟ್ಟಿತು. ಈ ಸಂಬಂಧವಾಗಿ ಈ ಕೆಳಗಿನ ಅಂಶಗಳನ್ನೂ ಸಹ ಗಮನಿಸಲಾಯಿತು:

(1) ಏಪ್ರಿಲ್ 2005 ಹಾಗೂ ಮಾರ್ಚ್ 2010ರ ನಡುವೆ ನೋಂದಣಿ ಮಾಡಿಸಿಕೊಂಡಿದ್ದಂಥ 9,167 ಬ್ಯಾಟರಿಯಿಂದ ಕಾರ್ಯನಿರ್ವಹಿಸುವ ವಾಹನಗಳ ಪೈಕಿ, 2,147 ವಾಹನಗಳಿಗೆ ಸಂಬಂಧಿಸಿದಂತೆ ಮಾರಾಟದ ಮೊತ್ತವನ್ನು ವಾಹನ (VAHAN) ದತ್ತಸಂಚಯದಲ್ಲಿ ಸೆರೆಹಿಡಿದಿರಲಿಲ್ಲ ಹಾಗೂ ಉಳಿದ ವಾಹನಗಳಿಗೆ, ಅವಾಸ್ತವಿಕ ಅಂಕಿಸಂಖ್ಯೆಗಳ ಕಾರಣ ದತ್ತ/ಮಾಹಿತಿಯ ಪ್ರಾಮಾಣಿಕತೆಯ ಜೊತೆ ರಾಜಿ ಮಾಡಿಕೊಳ್ಳಲಾಗಿದ್ದಿತು. ಅದೇ ರೀತಿ, ಏಪ್ರಿಲ್ 2010 ಹಾಗೂ ಮಾರ್ಚ್ 2015ರ ನಡುವೆ ನೋಂದಣಿಯಾಗಿದ್ದಂತಹ 12618 ನಿರ್ಮಾಣ ಉಪಕರಣ ವಾಹನಗಳ ಪೈಕಿ 790 ವಾಹನಗಳಿಗೆ ಸಂಬಂಧಿಸಿದಂತೆ ಮಾರಾಟದ ಮೊತ್ತವನ್ನು ಸೆರೆಹಿಡಿದಿರಲಿಲ್ಲ.

(2) ಏಪ್ರಿಲ್ 2005 ಹಾಗೂ ಮಾರ್ಚ್ 2010ರ ನಡುವೆ, ವಿದ್ಯುಚ್ಛಕ್ತಿಯ ಆಧಾರದ ಮೇರೆಗೆ ಚಲಿಸುತ್ತಿದ್ದಂತಹ 6,427 ದ್ವಿಚಕ್ರ ವಾಹನಗಳು ಹಾಗೂ 2,740 ಲಘು ಮೋಟಾರು ವಾಹನಗಳು ನೋಂದಣಿಯಾಗಿದ್ದವು. ಪ್ರಾರಂಭಿಕ ಐದು ವರ್ಷಗಳಿಗೆ ವಿನಾಯಿತಿಯನ್ನು ಬಳಸಿಕೊಂಡನಂತರ, ಈ ವಾಹನಗಳು ಏಪ್ರಿಲ್ 2010 ಹಾಗೂ ಮಾರ್ಚ್ 2015ರ ನಡುವೆ ಜೀವಿತಾವಧಿ ತೆರಿಗೆಯನ್ನು ಪಾವತಿಸಲು ಬಾಧ್ಯವಾಗಿದ್ದವು. ಇವುಗಳ ಪೈಕಿ, 3,870 ದಿಚಕ್ರ ವಾಹನಗಳು ಹಾಗೂ 529 ಲಘು ಮೋಟಾರು ವಾಹನಗಳು ಬಾಕಿ ಇದ್ದಂತಹ ತೆರಿಗೆಯನ್ನು ಪಾವತಿಸುವಲ್ಲಿ ವಿಫಲಗೊಂಡಿದ್ದವು. ಈ ಪ್ರಕರಣಗಳಲ್ಲಿ ತೆರಿಗೆ ಬಾಕಿಗಳಿಗೆ ತಗಾದೆ ಸೃಷ್ಟಿಸಲು ಹಾಗೂ ವಸೂಲಾತಿ ಮಾಡಲು ಸಂಬಂಧಿತ ಪ್ರಾದೇಶಿಕ ಸಾರಿಗೆ ಕಚೇರಿಗಳು/ಉಪ–ಪ್ರಾದೇಶಿಕ ಸಾರಿಗೆ ಕಚೇರಿಗಳು ಯಾವುದೇ ಕ್ರಮವನ್ನೂ ತೆಗೆದುಕೊಂಡಿರಲಿಲ್ಲ. ಈ ಪ್ರಕರಣಗಳಿಂದ ಇದ್ದಂತಹ ಬಾಕಿಗಳಿಗೆ ಸಂಬಂಧಿಸಿದಂತೆ ವಾಹನ (VAHAN) ತಂತ್ರಾಂಶ ಅನ್ವಯದ ಮೂಲಕ ಹೊರತೆಗೆಯಲಾದಂತಹ ತಗಾದೆ, ವಸೂಲಾತಿ ಮತ್ತು ಬಾಕಿ ತ:ಖ್ತೆಗಳಲ್ಲಿ ಯಾವುದೇ ದಾಖಲೆಗಳಿರಲಿಲ್ಲ. ಈ ಪ್ರಕರಣಗಳಲ್ಲಿ ಜೀವಿತಾವಧಿ ತೆರಿಗೆಯನ್ನು ವಸೂಲಾತಿ ಮಾಡದಿದ್ದುದು ₹ 83.14 ಲಕ್ಷ[19]ಮೊತ್ತದಷ್ಟಿದ್ದಿತು.

(3) 36 ಪ್ರಾದೇಶಿಕ ಸಾರಿಗೆ ಕಚೇರಿಗಳು/ಉಪ–ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ[20] ಏಪ್ರಿಲ್ 2010 ಹಾಗೂ ಮಾರ್ಚ್ 2015ರ ನಡುವೆ ನೋಂದಣಿಯಾಗಿದ್ದಂತಹ 589 ನಿರ್ಮಾಣ ಉಪಕರಣ ವಾಹನಗಳಿಗೆ

---

[18] ನಿರ್ಮಾಣ ಉಪಕರಣ ವಾಹನ ಎಂದರೆ "ರಬ್ಬರು ಟೈರುಗಳನ್ನು ಹೊಂದಿದ (ನುಮಾಟಿಕ್ ಟೈರುಗಳನ್ನು) ಒಳಗೊಂಡಂತೆ, ರಬ್ಬರು ಪ್ಯಾಡುಗಳನ್ನು ಹೊಂದಿದ ಅಥವಾ ಸ್ಟೀಲು ಡ್ರಮ್ಮು ಚಕ್ರ/ವೀಲ್ ಮೌಂಟೆಡ್, ಸ್ವಯಂ–ಚಾಲನೆಯ, ಎಕ್ಸ್‌ಕವೇಟರು, ಲೋಡರು, ಬ್ಯಾಕ್‌ಹೋಯ್, ಕಾಂಪ್ಯಾಕ್ಟರ್ ರೋಲರು, ಡಂಪರು, ಮೋಟಾರು ಗ್ರೇಡರು, ಮೊಬೈಲು ಕ್ರೇನು, ದೋಝರ್, ಫೋರ್ಕ್ ಲಿಫ್ಟ್ ಟ್ರಕ್ಕು, ಸ್ವಯಂ ತುಂಬುವ ಕಾಂಕ್ರೀಟು ಮಿಕ್ಸರು ಅಥವಾ ಹೆದ್ದಾರಿಗಳ ಹೊರಗೆ ಗಣಿಗಳಲ್ಲಿ, ಕೈಗಾರಿಕಾ ಸಂಸ್ಥೆಗಳಲ್ಲಿ, ನೀರಾವರಿ ಹಾಗೂ ಸಾಮಾನ್ಯ ನಿರ್ಮಾಣಗಳಿಗಾಗಿ ವಿನ್ಯಾಸಗೊಳಿಸಲ್ಪಟ್ಟಿರುವ, ಆದರೆ "ಹೆದ್ದಾರಿಗಳಲ್ಲಿ ಬಳಸುವ ಸಾಮರ್ಥ್ಯದೊಂದಿಗೆ ಅಥವಾ ಸಾಮರ್ಥ್ಯವಿಲ್ಲದಿರುವುದರೊಂದಿಗೆ" ಆಗಿರುವ ಇತರೆ ಯಾವುದೇ ನಿರ್ಮಾಣ ಉಪಕರಣ ವಾಹನ ಅಥವಾ ಇವುಗಳ ಸಂಯೋಜಕಗಳು.

[19] ನೋಂದಣಿ ಟೇಬಲ್ಲಿನಲ್ಲಿ ಇನ್ವಾಯ್ಸು ದರ ಮಾಹಿತಿಯ ಅನುಪಸ್ಥಿತಿಯಲ್ಲಿ 3,870 ದ್ವಿಚಕ್ರ ವಾಹನಗಳ ಮಾರಾಟ ಮೌಲ್ಯವನ್ನು ವಾಹನ ಒಂದಕ್ಕೆ ₹ 30,000ದಂತೆ ಹಾಗೂ 529 ಎಲ್ಎಂವಿಗಳಿಗಳ ದರವನ್ನು ವಾಹನ ಒಂದಕ್ಕೆ ₹ 3,50,000/- ದಂತೆ ತೆಗೆದುಕೊಳ್ಳಲಾಗಿದೆ.

[20] ಬೆಳಗಾವಿ, ಬೆಂಗಳೂರು (ಕೇಂದ್ರ), ಬೆಂಗಳೂರು (ಪಶ್ಚಿಮ), ಬೆಂಗಳೂರು (ಪೂರ್ವ), ಬೆಂಗಳೂರು (ದಕ್ಷಿಣ), ಭಾಲ್ಕಿ, ಬೀದರ್, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕೋಡಿ, ಚಿತ್ರದುರ್ಗ, ದಾವಣಗೆರೆ, ದೇವನಹಳ್ಳಿ, ಧಾರವಾಡ, ಇಲೆಕ್ಟ್ರಾನಿಕ್ಸ್ ಸಿಟಿ, ಗದಗ, ಹಾಸನ, ಹೊಸಪೇಟೆ, ಹುಣಸೂರು, ಜ್ಞಾನಭಾರತಿ, ಕಲಬುರ್ಗಿ, ಕೋಲಾರ, ಕೊಪ್ಪಳ, ಕೆ.ಜಿ.ಎಫ್, ಕೆ.ಆರ್. ಪುರಂ, ಮಡಿಕೇರಿ, ಮಂಗಳೂರು, ಮಂಡ್ಯ, ಮೈಸೂರು (ಪಶ್ಚಿಮ), ನಾಗಮಂಗಲ, ನೆಲಮಂಗಲ, ರಾಯಚೂರು, ಸಾಗರ, ತುಮಕೂರು, ವಿಜಯಪುರ ಹಾಗೂ ಯಲಹಂಕ

ಸಂಬಂಧಿಸಿದಂತೆ, ಅವುಗಳ ಮೂಲೀಕರುಗಳು ಕೇವಲ ಒಂದೇ ಒಂದು ಕಂತು ತೆರಿಗೆಯನ್ನು ಪಾವತಿಸಿದ್ದರು. ₹ 3.78 ಕೋಟಿ ಮೊತ್ತದಷ್ಟು ಎರಡನೆಯ ಕಂತಿನ ಜೀವಿತಾವಧಿ ತೆರಿಗೆಗೆ[21] ತಗಾದೆಯನ್ನು ಸೃಷ್ಟಿಸಿರಲೂ ಇಲ್ಲ ಅಥವಾ ವಾಹನಗಳ ಮಾಲೀಕರುಗಳು ಪಾವತಿಸಿರಲೂ ಇಲ್ಲ. ಈ ವಾಹನಗಳಿಂದ ಬಾಕಿ ಇದ್ದಂತಹ ಜೀವಿತಾವಧಿ ತೆರಿಗೆ ಬಾಕಿಗಳನ್ನು ವಾಹನ (VAHAN) ತಂತ್ರಾಂಶ ಅನ್ವಯದ ತಗಾದೆ, ವಸೂಲಾತಿ ಮತ್ತು ಬಾಕಿ ಟೇಬಲ್ಲಿನಲ್ಲಿ ತೋರಿಸಿರಲಿಲ್ಲ.

ನೋಂದಾಯಿತ ವಾಹನಗಳ ಯಥಾರ್ಥತೆಯಿಂದ ಕೂಡಿದ ಇನ್ವಾಯ್ಸುಗಳನ್ನು ಸೆರೆಹಿಡಿಯುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ವಾಹನ (VAHAN) ತಂತ್ರಾಂಶ ಅನ್ವಯದಲ್ಲಿ ನಿಯಂತ್ರಣ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಇಲಾಖೆಯು ಸಮರ್ಪಕ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲ ಎಂಬುದನ್ನು ಈ ಪ್ರಕರಣಗಳು ಸಾಬೀತುಪಡಿಸುತ್ತವೆ. ಅಲ್ಲದೇ, ಬ್ಯಾಟರಿಯಿಂದ ಚಲಿಸುವ ವಾಹನಗಳು ಹಾಗೂ ನಿರ್ಮಾಣ ಉಪಕರಣ ವಾಹನಗಳಿಂದ ಬಾಕಿಯಿದ್ದಂತಹ ಜೀವಿತಾವಧಿ ತೆರಿಗೆ ವಸೂಲಾತಿಯ ಬಗ್ಗೆ ಸಂಬಂಧಿತ ಸಾರಿಗೆ ಕಚೇರಿಗಳ ಅನುಸರಣಾ ಕ್ರಮಗಳು ಅಸಮರ್ಪಕವಾಗಿದ್ದವು.

ನಿರ್ಮಾಣ ಉಪಕರಣ ವಾಹನಗಳನ್ನು ನಿರ್ಮಾಣ ಯೋಜನಾ ಪ್ರದೇಶಗಳಲ್ಲಿ ಬಳಸಲಾಗುತ್ತದೆ ಹಾಗೂ ಇವುಗಳು ರಸ್ತೆಯಲ್ಲಿ ಬಹಳ ವಿರಳವಾಗಿ ಕಂಡುಬರುತ್ತವೆ ಎಂಬುದಾಗಿ ಸರ್ಕಾರ/ಇಲಾಖೆಯು ನಿರ್ಗಮನ ಸಭೆಯಲ್ಲಿ ತಿಳಿಸಿತು. ನಿರ್ಮಾಣ ಯೋಜನಾ ನಿವೇಶನಗಳನ್ನು ಪರೀಕ್ಷಣೆ ಮಾಡುವುದರ ಮೂಲಕವೂ ಈ ವಾಹನಗಳನ್ನು ಪತ್ತೆಹಚ್ಚುವುದು ಕಷ್ಟಸಾಧ್ಯ. ಇವುಗಳ ಪೈಕಿ ಬಹಳಷ್ಟು ವಾಹನಗಳು ರಾಜ್ಯದಿಂದ ಹೊರಕ್ಕೆ ಹೋಗಿರಲೂ ಬಹುದು. ಆದರೆ, ಈ ವಾಹನಗಳನ್ನು ಪತ್ತೆಹಚ್ಚಲು ಹಾಗೂ ತೆರಿಗೆಯನ್ನು ವಸೂಲಾತಿ ಮಾಡಲು ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಹೊಸ ನೋಂದಣಿಗೆ, ನೋಂದಣಿಯ ಸಮಯದಲ್ಲಿಯೇ ಜೀವಿತಾವಧಿ ತೆರಿಗೆಯ ಬಾಕಿಯಿರುವ ಸಂಪೂರ್ಣ ಮೊತ್ತವನ್ನು ವಸೂಲಾತಿ ಮಾಡಲಾಗುತ್ತಿದೆ ಮತ್ತು ಆದ್ದರಿಂದ ಎರಡನೆಯ ಕಂತನ್ನು ವಸೂಲಾತಿ ಮಾಡುವಂತಹ ಪ್ರಕರಣಗಳು ಇನ್ನು ಮುಂದೆ ಉದ್ಭವಿಸುವುದಿಲ್ಲ. ಬ್ಯಾಟರಿಯಿಂದ ಚಲಿಸುವ ವಾಹನಗಳೂ ಹಾಗೂ ನಿರ್ಮಾಣ ಉಪಕರಣ ವಾಹನಗಳ ಮೇಲಿನ ಜೀವಿತಾವಧಿ ತೆರಿಗೆ ಬಾಕಿಗಳ ಜೊತೆ ತಗಾದೆ, ವಸೂಲಾತಿ ಮತ್ತು ಬಾಕಿ ತ:ಖ್ತೆಯನ್ನು ಇಂದಿನದಿನದನ್ನಾಗಿ ಮಾಡಲಾಗುವುದು ಹಾಗೂ ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂಬುದಾಗಿಯೂ ಉತ್ತರಿಸಿತು.

**ಬ್ಯಾಟರಿ ಚಾಲಿತ ವಾಹನಗಳಿಂದ ಅಧಿಕ ಪ್ರಮಾಣದಲ್ಲಿ ತೆರಿಗೆಯನ್ನು ವಸೂಲಾತಿ ಮಾಡಿದ್ದುದು.**

ಏಪ್ರಿಲ್ 2010 ಮತ್ತು ಮಾರ್ಚ್ 2015ರ ನಡುವೆ ನೋಂದಣಿ ಮಾಡಿಸಲಾದ 3,319 ಬ್ಯಾಟರಿ ಚಾಲಿತ ವಾಹನಗಳಿಗೆ ಸಂಬಂಧಿಸಿದಂತೆ 49 ಪ್ರಾದೇಶಿಕ ಸಾರಿಗೆ ಕಚೇರಿಗಳು/ಉಪ–ಪ್ರಾದೇಶಿಕ ಸಾರಿಗೆ ಕಚೇರಿಗಳು[22] ನೋಂದಣಿಯ ದಿನಾಂಕದಂದು ಅಧಿಸೂಚನೆಯ ಅಡಿಯಲ್ಲಿ ಈ ವಾಹನದ ಮಾಲೀಕರಿಗೆ ಲಭ್ಯವಿದ್ದಂತಹ ವಿನಾಯಿತಿಯಿಂದ ವಂಚಿಸಿ ಜೀವಿತಾವಧಿ ತೆರಿಗೆಯನ್ನು ವಸೂಲಾತಿ ಮಾಡಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯ ವಿಶ್ಲೇಷಣೆಯು ತೋರಿಸಿಕೊಟ್ಟಿತು.

ಈ ವಾಹನಗಳಿಂದ ವಸೂಲಾತಿ ಮಾಡಲಾದ ಜೀವಿತಾವಧಿ ತೆರಿಗೆಯ ಮೊತ್ತವು ₹ 3.25 ಕೋಟಿ ಆಗಿದ್ದಿತು. ಈ ವಾಹನಗಳಿಂದ ನೋಂದಣಿಯ ದಿನಾಂಕದಿಂದ ಐದು ವರ್ಷಗಳು ಕಳೆದನಂತರ ಬರಬೇಕಾಗಿದ್ದ ತೆರಿಗೆ ಮೊತ್ತವು ₹ 2.24 ಕೋಟಿ ಆಗುತ್ತದೆ, ಇದು ₹ 1.01 ಕೋಟಿ ಮೊತ್ತದಷ್ಟು ಹೆಚ್ಚುವರಿ ತೆರಿಗೆಯನ್ನು ವಸೂಲಾತಿ ಮಾಡುವಲ್ಲಿ ಪರಿಣಮಿಸಿತು.

---

21 ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ರ ಷೆಡ್ಯೂಲು ಎ–7 ಪ್ರಕಾರ, ನಿರ್ಮಾಣ ಉಪಕರಣ ವಾಹನದ ಮೇಲೆ ವಿಧಿಸಬೇಕಾದ ಜೀವಿತಾವಧಿ ತೆರಿಗೆಯ ದರವು 1 ಏಪ್ರಿಲ್ 2010ರಿಂದ ಜಾರಿಗೆ ಬಂದಿರುವಂತೆ ವಾಹನದ ಮೌಲ್ಯದ ಶೇಕಡಾ ಆರರಷ್ಟು. ನೋಂದಣಿಯ ದಿನಾಂಕದಿಂದ 1 ಏಪ್ರಿಲ್ 2010ರವರೆಗೆ ವಾಹನವು ಕಳೆದಿರುವ ಜೀವಿತಾವಧಿಯ ಆಧಾರದ ಮೇರೆಗೆ ಜೀವಿತಾವಧಿ ತೆರಿಗೆಯನ್ನು ಲೆಕ್ಕ ಹಾಕುವ ಸಮಯದಲ್ಲಿ ಶೇಕಡಾವಾರು ಸವಕಳಿಗೂ ಸಹ ಷೆಡ್ಯೂಲು ಅನುವು ಮಾಡಿದೆ. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ರ ಪರಿಚ್ಛೇದ 3–ಎ, ಜೀವಿತಾವಧಿ ತೆರಿಗೆಯ ಮೇಲೆ 1 ಏಪ್ರಿಲ್ 2010ರಿಂದ ಶೇಕಡಾ 10ರ ದರದಲ್ಲಿ ಹಾಗೂ 1 ಏಪ್ರಿಲ್ 2011ರಿಂದ ಶೇಕಡಾ 11ರ ದರದಲ್ಲಿ ಸೆಸ್ ಅನ್ನು ವಿಧಿಸಲು ಅನುವು ಮಾಡಿದೆ. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ರ ಪರಿಚ್ಛೇದ 4 ಈ ವಾಹನಗಳ ಮೇಲಿನ ಜೀವಿತಾವಧಿ ತೆರಿಗೆಯನ್ನು ಎರಡು ಸಮನಾದ ಕಂತುಗಳಲ್ಲಿ ಅಂದರೆ ಮೊದಲನೆಯ ಕಂತನ್ನು ತೆರಿಗೆ ಪಾವತಿಯು ಬಾಕಿ ಇರುವಾಗ ಅಥವಾ ನೋಂದಣಿಯ ಸಮಯದಲ್ಲಿ ಹಾಗೂ ಎರಡನೆಯ ಕಂತನ್ನು ಮೊದಲನೆಯ ಕಂತನ್ನು ಪಾವತಿಸಿದ ದಿನಾಂಕದಿಂದ ಆರು ತಿಂಗಳುಗಳ ಒಳಗೆ ಪಾವತಿಸಲು ಅನುವು ಮಾಡಿದೆ. ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 2013ರಲ್ಲಿ 1 ಏಪ್ರಿಲ್ 2013ರಿಂದ ಜಾರಿಗೆ ಬಂದಂತೆ ತೆರಿಗೆ ಪಾವತಿಯನ್ನು ಎರಡು ಕಂತುಗಳಲ್ಲಿ ಮಾಡುವ ಪ್ರಯೋಜನವನ್ನು ಬರುವಂತೆ ತೆಗೆದುಹಾಕಲಾಯಿತು ಹಾಗೂ ಆ ದಿನಾಂಕದಿಂದ ತೆರಿಗೆಯ ಸಂಪೂರ್ಣ ಮೊತ್ತವನ್ನು ನೋಂದಣಿಯ ದಿನಾಂಕದಂದು ಪಾವತಿಸಬೇಕಿದ್ದಿತು.

22 ಬಾಗಲಕೋಟಿ, ಬಳ್ಳಾರಿ, ಬೆಳಗಾವಿ, ಬೆಂಗಳೂರು (ಕೇಂದ್ರ), ಬೆಂಗಳೂರು (ದಕ್ಷಿಣ), ಬೆಂಗಳೂರು (ಉತ್ತರ), ಬೆಂಗಳೂರು (ದಕ್ಷಿಣ), ಬಿದರೆ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ದೇವನಹಳ್ಳಿ, ಧಾರವಾಡ, ಇಲೆಕ್ಟ್ರಾನಿಕ್ಸ್ ಸಿಟಿ, ಗದಗ, ಗೋಕಾಕ, ಹಾಸನ, ಹಾವೇರಿ, ಹೊನ್ನಾವರ, ಹೊಸಪೇಟೆ, ಹುಣಸೂರು, ಜ್ಞಾನಭಾರತಿ, ಜಮಖಂಡಿ, ಕಲಬುರ್ಗಿ, ಕಾರವಾರ, ಕೋಲಾರ, ಕೊಪ್ಪಳ ಕೆ.ಜಿ.ಎಫ್, ಕೆ.ಆರ್. ಪುರಂ, ಮಧುಗಿರಿ, ಮಡಿಕೇರಿ, ಮಂಗಳೂರು, ಮಂಡ್ಯ, ಮೈಸೂರು ಪೂರ್ವ, ಮೈಸೂರು ಪಶ್ಚಿಮ, ನಾಗಮಂಗಲ, ನೆಲಮಂಗಲ, ಪುತ್ತೂರು, ರಾಮನಗರ, ರಾಯಚೂರು, ಸಾಗರ, ಶಿವಮೊಗ್ಗ, ಸಿರ್ಸಿ, ತಿಪಟೂರು, ತುಮಕೂರು, ಉಡುಪಿ, ವಿಜಾಪುರ ಹಾಗೂ ಯಲಹಂಕ.

ಬ್ಯಾಟರಿ ಚಾಲಿತ ವಾಹನಗಳಿಗೆ ಸರ್ಕಾರವು ನೀಡಿದ್ದಂತಹ ರಿಯಾಯಿತಿ/ವಿನಾಯಿತಿಯು ವಾಹನಗಳಲ್ಲಿ ಇಂಧನದ ಬದಲಿ ಮೂಲಗಳ ಬಳಕೆಯನ್ನು ಪ್ರೋತ್ಸಾಹಿಸುವುದಕ್ಕಾಗಿದ್ದಿತು.

ಬ್ಯಾಟರಿ ಚಾಲಿತ ವಾಹನಗಳಿಗೆ ಸಂಬಂಧಿಸಿದಂತೆ ತೆರಿಗೆಯನ್ನು ಮುಂಗಡವಾಗಿ ವಸೂಲಾತಿ ಮಾಡುವ ಬಗ್ಗೆ ವಿಷಯವನ್ನು ಪರಿಶೀಲಿಸಲಾಗುವುದು ಹಾಗೂ ಐದು ವರ್ಷಗಳವರೆವಿಗೆ ತೆರಿಗೆ ವಿನಾಯಿತಿಯನ್ನು ನೀಡಿರುವ ಅಧಿಸೂಚನೆಯನ್ನು ಗಮನಿಸಲಾಗುವುದು ಎಂಬುದಾಗಿ ಇಲಾಖೆಯು ತಿಳಿಸಿತು.

## 5.4.5 ಹಸಿರು ತೆರಿಗೆಗೆ ತಗಾದೆಯನ್ನು ಸೃಷ್ಟಿಸದಿದ್ದುದು/ಪಾವತಿಯಿಂದ ತಪ್ಪಿಸಿಕೊಂಡಿದ್ದುದು

ಸಾಗಣೆಯೇತರ ವಾಹನಗಳು ಹಾಗೂ ಸಾಗಣೆ ವಾಹನಗಳಿಗೆ ಸಂಬಂಧಿಸಿದಂತೆ ಹಸಿರು ತೆರಿಗೆಯ (Green Tax)[23] ವಿಧಿಸುವಿಕೆ ಹಾಗೂ ವಸೂಲಾತಿಯ ವ್ಯವಸ್ಥೆಯು ಪರಿಣಾಮಕಾರಿಯಾಗಿದ್ದಿತೆ ಹಾಗೂ ಸಮರ್ಪಕವಾಗಿದ್ದಿತೆ ಎಂಬುದನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ ದತ್ತ/ಮೂಲಮಾಹಿಯ ವಿಶ್ಲೇಷಣೆಯನ್ನು ಮಾಡಲಾಯಿತು.

ಏಪ್ರಿಲ್ 2000 ಹಾಗೂ 31 ಮಾರ್ಚ್ 2007ರ ನಡುವೆ ನೋಂದಣಿಯಾಗಿದ್ದಂತಹ ಹಾಗೂ 2010 ಹಾಗೂ 2015ರ ನಡುವೆ ಕಡೆಯಪಕ್ಷ ಒಂದು ಬಾರಿಯಾದರೂ ಹಸಿರು ತೆರಿಗೆ ಪಾವತಿಗೆ ಬಾಧ್ಯವಾಗಿದ್ದಂತಹ 5,29,159 ಸಾಗಣೆ ವಾಹನಗಳ ವಿಶ್ಲೇಷಣೆಯನ್ನು ಮಾಡಲಾಯಿತು. 4,02,666 ವಾಹನಗಳಿಂದ ₹ 23.52 ಕೋಟಿ ಮೊತ್ತದಷ್ಟು ಹಸಿರು ತೆರಿಗೆಯನ್ನು ಇಲಾಖೆಯು ವಸೂಲಾತಿ ಮಾಡಿರಲಿಲ್ಲ ಎಂಬುದನ್ನು ಗಮನಿಸಲಾಯಿತು.

ಅದೇ ಅವಧಿಗೆ ಅಂದರೆ 2010 ಹಾಗೂ 2015ರ ಅವಧಿಗೆ, 9,69,706 ಸಾಗಣೆಯೇತರ ವಾಹನಗಳಿಂದ, ಈ ವಾಹನಗಳು ನೋಂದಣಿ ಪ್ರಮಾಣಕ್ಕಾಗಿ ಹಾಜರಾಗಿರಲಿಲ್ಲವಾದ್ದರಿಂದ ಬಾಕಿಯಿದ್ದಂತಹ ₹ 29.01 ಕೋಟಿ ಮೊತ್ತದಷ್ಟು ಹಸಿರು ತೆರಿಗೆಯನ್ನೂ ಸಹ ಸರ್ಕಾರವು ವಸೂಲಾತಿ ಮಾಡಿರಲಿಲ್ಲ .

ಸುಸ್ಥಿತಿ ಪ್ರಮಾಣಪತ್ರ/ನೋಂದಣಿ ಪ್ರಮಾಣಪತ್ರಗಳ ನವೀಕರಣಕ್ಕಾಗಿ ವಾಹನಗಳು ಹಾಜರಾದ ವೇಳೆಯಲ್ಲಿ ಹಸಿರು ತೆರಿಗೆಯನ್ನು ವಸೂಲಾತಿ ಮಾಡಲಾಗುತ್ತಿದ್ದಂತಹ ಪ್ರಮುಖ ಕಾರಣದಿಂದ ಹಸಿರು ತೆರಿಗೆಯನ್ನು ವಸೂಲಾತಿ ಮಾಡಲಾಗಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ವಾಹನಗಳು ಸುಸ್ಥಿತಿ ಪ್ರಮಾಣಪತ್ರ ಅಥವಾ ನೋಂದಣಿ ಪ್ರಮಾಣಪತ್ರದ ನವೀಕರಣಕ್ಕೆ ಹಾಜರಾಗದಿದ್ದಲ್ಲಿ, ಅದು ಹಸಿರು ತೆರಿಗೆಯ ವಸೂಲಾತಿಯ ಮೇಲೆ ಪ್ರಭಾವವನ್ನು ಬೀರುತ್ತಿದ್ದಿತು.

ಹಸಿರು ತೆರಿಗೆಯು ಎಲ್ಲಾ ವಾಹನಗಳ ಪ್ರಾರಂಭಿಕ ನೋಂದಣಿಯ ಏಳು ವರ್ಷಗಳನಂತರ ವರ್ಷಕ್ಕೆ ಒಂದು ಸಲ ವಿಧಿಸಬೇಕಾದ ತೆರಿಗೆ ಹಾಗೂ ಸುಸ್ಥಿತಿ ಪ್ರಮಾಣ ಪತ್ರವನ್ನು ನವೀಕರಿಸುವ ವೇಳೆಯಲ್ಲಿ ಹಿಂದಿನ ಯಾವ ವರ್ಷಗಳಿಗೆ ಅದು ಬಾಕಿಯಿರುವುದೋ ಆ ವರ್ಷಗಳಿಗೆ ವಸೂಲಾತಿ ಮಾಡಬೇಕಾದುದು ಎಂಬುದಾಗಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ನಿರ್ಗಮನ ಸಭೆಯಲ್ಲಿ ತಿಳಿಸಿದರು.

**ಶಿಫಾರಸು ಸಂಖ್ಯೆ 5: ವಾಹನಗಳು ಕಳೆದಿರುವ ನಿರ್ದಿಷ್ಟ ಅವಧಿಯನಂತರ ಎಲ್ಲಾ ವಾಹನಗಳಿಂದಲೂ ಹಸಿರು ತೆರಿಗೆ ವಸೂಲಾತಿಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಕರ್ನಾಟಕ ಮೋಟಾರು ವಾಹನಗಳ ಅಧಿನಿಯಮದ ಪರಿಚ್ಛೇದ 3–ಬಿಗೆ ತಿದ್ದುಪಡಿ ಮಾಡುವುದು.**

## 5.4.6. ನಿರ್ಣಯ

ವಾಹನಗಳ ಸಮರ್ಪಕ ನೋಂದಣಿ ಹಾಗೂ ನೋಂದಣಿಯ ಸಮಯದಲ್ಲಿ ಸಾಗಣೆಯೇತರ ವಾಹನಗಳಿಂದ ಜೀವಿತಾವಧಿ ತೆರಿಗೆಯನ್ನು ವಿಧಿಸುವಿಕೆ ಹಾಗೂ ವಸೂಲಾತಿಗೆ ಇರುವಂತಹ ವ್ಯವಸ್ಥೆಯು ತಕ್ಕಮಟ್ಟಿಗೆ ಸಮರ್ಪಕವಾಗಿದೆ. ಆದರೆ ಸಾಗಣೆ ವಾಹನಗಳಿಗೆ ಸಂಬಂಧಿಸಿದಂತೆ ಒಂದು ನಿರ್ದಿಷ್ಟ ದರದಲ್ಲಿ ನಿಯತವಾಗಿ ತ್ರೈಮಾಸಿಕ ತೆರಿಗೆ ಪಾವತಿಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ತಂತ್ರಾಂಶ ವ್ಯವಸ್ಥೆಯಲ್ಲಿ ಸಮರ್ಪಕ

[23] ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ರ ಪರಿಚ್ಛೇದ 3–ಬಿ ಅಡಿಯಲ್ಲಿ, ವಾಯು ಮಾಲಿನ್ಯದ ನಿಯಂತ್ರಣಕ್ಕಾಗಿ ವಿವಿಧ ಕ್ರಮಗಳನ್ನು ಕಾರ್ಯಗತಗೊಳಿಸುವ ಉದ್ದೇಶದಿಂದ ಹಸಿರು ತೆರಿಗೆಯನ್ನು ವಿಧಿಸತಕ್ಕದ್ದು ಹಾಗೂ ಸಾಗಣೆಯೇತರ ವಾಹನಗಳು ಮತ್ತು ಸಾಗಣೆ ವಾಹನಗಳ ಮಾಲೀಕರುಗಳಿಂದ ವಸೂಲಾತಿ ಮಾಡತಕ್ಕದ್ದು. ಹಸಿರು ತೆರಿಗೆಯ ವಸೂಲಾತಿಗಾಗಿ ದರಗಳು ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವಂತಿವೆ:

| ವರ್ಗ ಹಾಗೂ ವಾಹನವು ಕಳೆದಿರುವ ಜೀವಿತಾವಧಿ | ಹಸಿರು ತೆರಿಗೆ ದರ |
|---|---|
| ಅದರ ನೋಂದಣೀಯ ದಿನಾಂಕದಿಂದ ಅಥವಾ ಅವುಗಳ ನೋಂದಣಿ ಪ್ರಮಾಣಪತ್ರವನ್ನು ನವೀಕರಿಸುವ ಸಮಯದಲ್ಲಿ 15 ವರ್ಷಗಳನ್ನು ಪೂರ್ಣಗೊಳಿಸಿರುವ ಸಾಗಣೆಯೇತರ ವಾಹನಗಳು | |
| (ಎ) ದ್ವಿಚಕ್ರ ವಾಹನಗಳು | 250 |
| (ಬಿ) ದ್ವಿಚಕ್ರ ವಾಹನಗಳನ್ನು ಹೊರತುಪಡಿಸಿದಂತೆ ಇತರೆ ವಾಹನಗಳು | 500 |
| ಅವುಗಳ ನೋಂದಣಿ ದಿನಾಂಕದಿಂದ ಅಥವಾ ನೋಂದಣಿ ಅಥವಾ ಸುಸ್ಥಿತಿ ಪ್ರಮಾಣಪತ್ರಗಳನ್ನು ನವೀಕರಿಸುವ ವೇಳೆಯಲ್ಲಿ ಏಳು ವರ್ಷಗಳನ್ನು ಪೂರ್ಣಗೊಳಿಸಿರುವ ಸಾಗಣೆ ವಾಹನಗಳು | ವರ್ಷ ಒಂದಕ್ಕೆ 200 |

ನಿಯಂತ್ರಣಗಳನ್ನು ಅಳವಡಿಸಿರಲಿಲ್ಲ. ಈ ನಿಟ್ಟಿನಲ್ಲಿ ವಾಹನ (VAHAN) ತಂತ್ರಾಂಶ ವ್ಯವಸ್ಥೆಯ ಮೂಲಕ ಹೊರತೆಗೆಯಲಾದಂತಹ ಯಥಾರ್ಥತೆಯಿಂದ ಕೂಡಿರದ ತಗಾದೆ, ವಸೂಲಾತಿ ಮತ್ತು ಬಾಕಿ ತ:ಖ್ತೆಗಳು ಹಾಗೂ ತೆರಿಗೆ ಪಾವತಿಯಿಂದ ತಪ್ಪಿತಸ್ಥಗೊಂಡಿರುವ ವಾಹನಗಳಿಂದ ಬರಬೇಕಾದ ವಾಸ್ತವಿಕ ತೆರಿಗೆ ಮೊತ್ತಕ್ಕೆ ಪ್ರತಿಯಾಗಿ ವಾಹನವೊಂದಕ್ಕೆ ಒಂದು ತ್ರೈಮಾಸಿಕದ ತೆರಿಗೆಯನ್ನು ಮಾತ್ರ ತಗಾದೆ ಸೃಷ್ಟಿಸಿದ್ದರ ಕಾರಣ ಮೇಲ್ವಿಚಾರಣೆ ಹಾಗೂ ಅನುಸರಣಾ ಕ್ರಮಗಳ ವ್ಯವಸ್ಥೆಯೂ ಕೂಡ ಕೊರತೆಯಿಂದ ಕೂಡಿರುವುದು ಕಂಡುಬಂದಿತು. ಸುಸ್ಥಿತಿ ಪ್ರಮಾಣಪತ್ರ/ನೋಂದಣಿ ಪ್ರಮಾಣಪತ್ರದ ನವೀಕರಣಕ್ಕೆ ಸಂಬಂಧಿತ ಅನುವುಗಳ ಜೊತೆಯಲ್ಲಿ ಅನುಸರಣಾ ಕ್ರಮಗಳು ನಿಕೃಷ್ಟಮಟ್ಟದಲ್ಲಿದ್ದ ಕಾರಣ ಮೋಟಾರು ವಾಹನಗಳ ಬಳಕೆಯ ನಿಯಂತ್ರಣಕ್ಕೆ ಸಂಬಂಧಿಸಿದಂತೆ ನಿಯಂತ್ರಣಗಳು ಕೂಡ ಅಸಮರ್ಪಕವಾಗಿ ಕಂಡುಬಂದವು. ಓರ್ವ ಮೋಟಾರು ವಾಹನಗಳ ಪರೀಕ್ಷಕರು ಸುಸ್ಥಿತಿ ಪ್ರಮಾಣಪತ್ರಗಳ ಉದ್ದೇಶಕ್ಕಾಗಿ ಒಂದು ದಿನದಲ್ಲಿ ಪರೀಕ್ಷಣೆ ಮಾಡಬಹುದಾದಂತಹ ವಾಹನಗಳ ಸಂಖ್ಯೆಗೆ ಸಂಬಂಧಿಸಿದಂತೆ ಇಲಾಖೆಯು ಯಾವುದೇ ವಾಸ್ತವಿಕ ನಿರ್ಧಾರಣೆಯನ್ನೂ ಮಾಡಿರಲಿಲ್ಲ. 'ಹಸಿರು ತೆರಿಗೆ'ಯ ವಸೂಲಾತಿಯನ್ನು ಸುಸ್ಥಿತಿ ಪ್ರಮಾಣಪತ್ರ/ನೋಂದಣಿ ಪ್ರಮಾಣಪತ್ರದ ಜೊತೆ ಸಂಪರ್ಕಿಸಲಾಗಿದ್ದಿತಾದ್ದರಿಂದ, ಅದು ದುರ್ಬಲಗೊಂಡಿದ್ದಿತು. ಇಲಾಖೆಯು ನಿರ್ಗಮನ ಸಭೆಯಲ್ಲಿ ಶಿಫಾರಸುಗಳನ್ನು ಒಪ್ಪಿಕೊಂಡಿತು.

## 5.5 ನಿರ್ಮಾಣ ಉಪಕರಣ ವಾಹನಗಳ ಮೇಲೆ ಜೀವಿತಾವಧಿ ತೆರಿಗೆಗೆ ತಗಾದೆಯನ್ನು ಸೃಷ್ಟಿಸದಿದ್ದುದು ಹಾಗೂ ವಸೂಲಾತಿ ಮಾಡದಿದ್ದುದು

ನಿರ್ಮಾಣ ಉಪಕರಣ ವಾಹನಗಳಿಗೆ 31 ಮಾರ್ಚ್ 2010ರವರೆವಿಗೂ ತ್ರೈಮಾಸಿಕ ತೆರಿಗೆಯನ್ನು ವಿಧಿಸಲ್ಪಡಲಾಗುತ್ತಿತ್ತು. ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 2010ರ ಮೂಲಕ 1 ಏಪ್ರಿಲ್ 2010ರಿಂದ ಜಾರಿಗೆ ಬರುವಂತೆ ಜೀವಿತಾವಧಿ ತೆರಿಗೆ ಪಾವತಿಯ ಅಡಿಯಲ್ಲಿ ತರಲಾಯಿತು. ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೆಯ ತಿದ್ದುಪಡಿ) ಅಧಿನಿಯಮ, 2010ರ ಮೂಲಕ ವಿಧಿಸಬೇಕಾದಂತಹ ತೆರಿಗೆಯ ದರವನ್ನು ಹೊಸ ವಾಹನಗಳ ನೋಂದಣಿಯ ಸಮಯದಲ್ಲಿ ವಾಹನದ ಮೌಲ್ಯದ ಶೇಕಡಾ ಆರು ಎಂಬುದಾಗಿ ನಿಗಧಿಪಡಿಸಲಾಗಿದ್ದಿತು. ಈಗಾಗಲೇ ನೋಂದಣಿಯಾಗಿರುವ ವಾಹನಕ್ಕೆ ಸಂಬಂಧಿಸಿದಂತೆ, ವಾಹನವು ಕಳೆದಿರುವ ಜೀವಿತಾವಧಿಗೆ ಅನುಗುಣವಾಗಿ ದರಗಳಲ್ಲಿ ಇಳಿಕೆಯನ್ನು ನಿರ್ದಿಷ್ಟಪಡಿಸಲಾಗಿದ್ದಿತು. ಇದನ್ನು ಎರಡು ಸಮಾನ ಕಂತುಗಳಲ್ಲಿ ಅಂದರೆ ಅರ್ಧ ಮೊತ್ತವನ್ನು ನೋಂದಣಿಯ ಸಮಯದಲ್ಲಿ ಅಥವಾ ಅದು ಪಾವತಿಸಲು ಬಾಕಿಯಾದಂತಹ ದಿನಾಂಕದಂದು ಹಾಗೂ ಉಳಿಕೆ ಮೊತ್ತವನ್ನು ಮೊದಲ ಕಂತನ್ನು ಪಾವತಿಸಿದ ದಿನಾಂಕದಿಂದ ಆರು ತಿಂಗಳುಗಳ ಒಳಗೆ ಪಾವತಿಸಲು ಅನುಮತಿಯನ್ನು ನೀಡಲಾಗಿದ್ದಿತು. 31 ಮಾರ್ಚ್ 2011ರವರೆವಿಗೆ ತೆರಿಗೆಯ ಶೇಕಡಾ 10ರಷ್ಟು ಹಾಗೂ 1 ಏಪ್ರಿಲ್ 2011ರಿಂದ ಶೇಕಡಾ 11ರಷ್ಟು ಸೆಸ್ ಮೊತ್ತವನ್ನೂ ಸಹ ವಿಧಿಸಬೇಕಿದ್ದಿತು.

10 ಪ್ರದೇಶಿಕ ಸಾರಿಗೆ ಕಚೇರಿಗಳು/ಉಪ-ಪ್ರಾದೇಶಿಕ ಸಾರಿಗೆ ಕಚೇರಿಗಳ ದಾಖಲೆಗಳನ್ನು ಮೇ 2014 ಮತ್ತು ನವಂಬರ್ 2014ರ ನಡುವೆ ಪರೀಕ್ಷಾ-ಪರಿಶೀಲನೆ ಮಾಡಲಾಗಿ, ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು:

ಆರು[24] ಪ್ರದೇಶಿಕ ಸಾರಿಗೆ ಕಚೇರಿಗಳು/ಉಪ-ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ 67 ನಿರ್ಮಾಣ ಉಪಕರಣ ವಾಹನಗಳಿಗೆ ಸಂಬಂಧಿಸಿದಂತೆ ₹ 77.46 ಲಕ್ಷ ಮೊತ್ತದಷ್ಟು ಜೀವಿತಾವಧಿ ತೆರಿಗೆ ಹಾಗೂ ಸೆಸ್ ಅನ್ನು ವಸೂಲಾತಿ ಮಾಡಿರಲಿಲ್ಲ. ಒಂದು ಪ್ರಕರಣದಲ್ಲಿ, ಮೈಸೂರಿನ (ಪೂರ್ವ) ಪ್ರಾದೇಶಿಕ ಸಾರಿಗೆ ಕಚೇರಿಗೆ ಸಂಬಂಧಿಸಿದಂತೆ, ಅಕ್ಟೋಬರ್ 2011ರಲ್ಲಿ ನೋಂದಣಿಯಾದಂತಹ ಒಂದು ವಾಹನಕ್ಕೆ ತೆರಿಗೆಯನ್ನು ಜೀವಿತಾವಧಿ ತೆರಿಗೆಗೆ ಬದಲಾಗಿ ತ್ರೈಮಾಸಿಕ ದರಗಳಲ್ಲಿ ವಿಧಿಸಲಾಗಿದ್ದಿತು. ಉಳಿದ 66 ಪ್ರಕರಣಗಳಿಗೆ ಸಂಬಂಧಿಸಿದಂತೆ, ಜೀವಿತಾವಧಿ ತೆರಿಗೆಯನ್ನು ವಸೂಲಾತಿ ಮಾಡಿರಲಿಲ್ಲ.

ಮುಂದುವರೆದು, ಆರು[25] ಪ್ರದೇಶಿಕ ಸಾರಿಗೆ ಕಚೇರಿಗಳು/ಉಪ-ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ 21 ಪ್ರಕರಣಗಳಲ್ಲಿ, ವಾಹನಗಳ ಮಾಲೀಕರು ಮೊದಲ ಕಂತನ್ನು ಪಾವತಿಸಿದ್ದರು, ಆದರೆ ₹ 15.02 ಲಕ್ಷ ಮೊತ್ತದಷ್ಟು ಎರಡನೆಯ ಕಂತನ್ನು ಪಾವತಿಸಿರಲಿಲ್ಲ ಎಂಬುದನ್ನು ನಾವು ಗಮನಿಸಿದೆವು.

ಜೀವಿತಾವಧಿ ತೆರಿಗೆಗೆ ತಗಾದೆಯನ್ನು ಸೃಷ್ಟಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಸೂಲಾತಿ ಮಾಡಿದ್ದುದು/ವಸೂಲಾತಿ ಮಾಡದಿದ್ದುದು ₹ 92.48 ಲಕ್ಷ ಆಗಿದ್ದಿತು.

ಇದನ್ನು ಮಾರ್ಚ್ 2015ರಲ್ಲಿ ಸಾರಿಗೆ ಮತ್ತು ರಸ್ತೆ ಸುರಕ್ಷತೆಯ ಆಯುಕ್ತರವರ ಗಮನಕ್ಕೆ ತಂದನಂತರ ಹಾಗೂ ಜೂನ್ 2015ರಲ್ಲಿ ಸರ್ಕಾರಕ್ಕೆ ತಿಳಿಸಿದನಂತರ 22 ಪ್ರಕರಣಗಳಲ್ಲಿ ₹ 18.66 ಲಕ್ಷ ಮೊತ್ತವನ್ನು ವಸೂಲಾತಿ ಮಾಡಲಾಗಿದ್ದಿತು. ಉಳಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ನವಂಬರ್ 2015).

## 5.6 ತ್ರೈಮಾಸಿಕ ತೆರಿಗೆ ಪಾವತಿಗಾಗಿ ತಗಾದೆಯನ್ನು ಸೃಷ್ಟಿಸದಿದ್ದುದು

ರಸ್ತೆಗಳಲ್ಲಿ ಬಳಸಲು ಸೂಕ್ತವಾಗಿರುವ ಎಲ್ಲಾ ಮೋಟಾರು ವಾಹನಗಳ ಮೇಲೆ ತೆರಿಗೆಯನ್ನು ವಿಧಿಸಲು ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ರ ಪರಿಚ್ಛೇದ 3 ಅನುವು ಮಾಡಿದೆ. ವಿವಿಧ ಪ್ರವರ್ಗಗಳ ವಾಹನಗಳಿಗೆ ಅಧಿನಿಯಮದ ಷೆಡ್ಯೂಲಿನಲ್ಲಿ ನಿರ್ದಿಷ್ಟಪಡಿಸಲಾಗಿರುವ ದರಗಳಲ್ಲಿ ತೆರಿಗೆಯನ್ನು ವಿಧಿಸತಕ್ಕದ್ದು. ವಿಧಿಸಲಾದಂತಹ ತೆರಿಗೆಯನ್ನು ವಾಹನಗಳ ಮಾಲೀಕರುಗಳು ಒಂದು ತ್ರೈಮಾಸಿಕಕ್ಕೆ, ಅರ್ಧ ವಾರ್ಷಿಕಕ್ಕೆ ಒಂದು ವರ್ಷಕ್ಕೆ ಮುಂಗಡವಾಗಿ, ಅಂತಹ ಅವಧಿಯು ಪ್ರಾರಂಭಗೊಳ್ಳುವ ದಿನಾಂಕದಿಂದ ಹದಿನೈದು ದಿನಗಳ ಒಳಗೆ ಪಾವತಿಸತಕ್ಕದ್ದು. ಇದರ ಜೊತೆಗೆ, ತೆರಿಗೆ ಮೊತ್ತದ ಶೇಕಡಾ 11ರಷ್ಟನ್ನು ಸೆಸ್ ಆಗಿ ವಿಧಿಸತಕ್ಕದ್ದು.

ಏಳು[26] ಪ್ರಾದೇಶಿಕ ಸಾರಿಗೆ ಕಚೇರಿಗಳ ದಾಖಲೆಗಳನ್ನು ಸೆಪ್ಟಂಬರ್ 2014 ಹಾಗೂ ಜನವರಿ 2015ರ ನಡುವೆ ಮಾಡಲಾದಂತಹ ಪರೀಕ್ಷಾ-ಪರಿಶೀಲನೆಯ ವೇಳೆಯಲ್ಲಿ 93 ವಾಹನಗಳಿಗೆ ಸಂಬಂಧಿಸಿದಂತೆ ಜನವರಿ

[24] ಬೆಂಗಳೂರು (ಪಶ್ಚಿಮ), ಬೆಳಗಾವಿ, ಕಲಬುರ್ಗಿ, ಮೈಸೂರು (ಪೂರ್ವ), ಕೋಲಾರ ಚಿನ್ನದ ಗಣಿಗಳು (ಕೆಜಿಎಫ್), ಹಾಗೂ ವಿಜಯಪುರ.

[25] ಬಾಗಲಕೋಟೆ, ಬೆಳಗಾವಿ, ಧಾರವಾಡ, ಕೊಪ್ಪಳ, ಕೆಜಿಎಫ್ ಹಾಗೂ ತಿಪಟೂರು.

2012ರಿಂದ ಮೇ 2014ರ ನಡುವಿನ ವಿವಿಧ ಅವಧಿಗಳಿಗೆ ಬಾಕಿಯಿದ್ದಂತಹ ₹ 34.08 ಲಕ್ಷ ಮೊತ್ತದಷ್ಟು ತೆರಿಗೆ ಮತ್ತು ಸೆಸ್ ಅನ್ನು ಪಾವತಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಸಂಬಂಧಿತ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ತಗಾದೆಗಳನ್ನು ಸೃಷ್ಟಿಸಲು ಹಾಗೂ ಬಾಕಿಯಿರುವ ತೆರಿಗೆಗಳನ್ನು ವಸೂಲಾತಿ ಮಾಡಲು ಯಾವುದೇ ಕ್ರಮಗಳನ್ನೂ ತೆಗೆದುಕೊಂಡಿರಲಿಲ್ಲ.

ಈ ಪ್ರಕರಣಗಳನ್ನು ಮಾರ್ಚ್ 2015ರಲ್ಲಿ ಸಾರಿಗೆ ಮತ್ತು ರಸ್ತೆ ಸುರಕ್ಷತೆಯ ಆಯುಕ್ತರವರ ಗಮನಕ್ಕೆ ತಂದನಂತರ ಹಾಗೂ ಜೂನ್ 2015ರಲ್ಲಿ ಸರ್ಕಾರಕ್ಕೆ ತಿಳಿಸಿದನಂತರ 19 ಪ್ರಕರಣಗಳಲ್ಲಿ ₹ 4.40 ಲಕ್ಷ ಮೊತ್ತವನ್ನು ವಸೂಲಾತಿ ಮಾಡಲಾಗಿದ್ದಿತು ಹಾಗೂ 14 ಪ್ರಕರಣಗಳಲ್ಲಿ ತಗಾದೆ ನೋಟೀಸುಗಳನ್ನು ನೀಡಲಾಗಿದ್ದಿತು. ಉಳಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ನವಂಬರ್ 2015).

## 5.7 ವಿದ್ಯುತ್ ಚಾಲಿತ ಮೋಟಾರು ವಾಹನಗಳ ಮೇಲೆ ಜೀವಿತಾವಧಿ ತೆರಿಗೆ ವಸೂಲಾತಿಗಾಗಿ ತಗಾದೆಯನ್ನು ಸೃಷ್ಟಿಸದಿದ್ದುದು

ಮೋಟಾರು ಸೈಕಲ್ಲುಗಳು ಹಾಗೂ ಮೋಟಾರು ಕಾರುಗಳ ಮೇಲೆ ಜೀವಿತಾವಧಿ ತೆರಿಗೆಯನ್ನು ವಿಧಿಸುವ ಸಲುವಾಗಿ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ರ ಪರಿಚ್ಛೇದ 3(1) ಅನುವು ಮಾಡಿದೆ. ನವಂಬರ್ 1993ರಲ್ಲಿ ಹೊರಡಿಸಲಾಗಿದ್ದಂತಹ ಸರ್ಕಾರಿ ಅಧಿಸೂಚನೆ ಸಂಖ್ಯೆ ಎಚ್‌ಟಿಡಿ 236 ಟಿಎಂಇ 93 ವಿದ್ಯುತ್ ಚಾಲಿತ ಮೋಟಾರು ವಾಹನಗಳಿಗೆ ಅವುಗಳ ನೋಂದಣಿಯ ದಿನಾಂಕದಿಂದ ಐದು ವರ್ಷಗಳವರೆವಿಗೆ ತೆರಿಗೆ ಪಾವತಿಯಿಂದ ವಿನಾಯಿತಿಯನ್ನು ನೀಡಿದೆ. ಮುಂದುವರೆದು, ವಿದ್ಯುತ್ ಚಾಲಿತ ಮೋಟಾರು ಸೈಕಲ್ಲುಗಳು ಮತ್ತು ಮೋಟಾರು ಕಾರುಗಳಿಗೆ ಅನುಕ್ರಮವಾಗಿ ಷೆಡ್ಯೂಲಿನ ಭಾಗ ಎ1 ಹಾಗೂ ಭಾಗ ಎ5ರಲ್ಲಿ ವಾಹನವು ಈಗಾಗಲೇ ಕಳೆದಿರುವ ಅವಧಿಯ ಅನುಸಾರ ತೆರಿಗೆಯ ದರಗಳನ್ನು ಇಳಿಸುವುದರೊಂದಿಗೆ, ಶೇಕಡಾ ನಾಲ್ಕರ ದರದಲ್ಲಿ ಜೀವಿತಾವಧಿ ತೆರಿಗೆ ಪಾವತಿಯನ್ನು ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 2010 ನಿರ್ದಿಷ್ಟಪಡಿಸಿದೆ. 31 ಮಾರ್ಚ್ 2011ರವರೆಗೆ ತೆರಿಗೆ ಮೊತ್ತದ ಶೇಕಡಾ 10ರ ದರದಲ್ಲಿ ಹಾಗೂ 1 ಏಪ್ರಿಲ್ 2011ರಿಂದ ಶೇಕಡಾ 11ರ ದರದಲ್ಲಿ ಸೆಸ್ ಅನ್ನೂ ವಿಧಿಸಬೇಕಿದ್ದಿತು.

ಐದು[27] ಪ್ರಾದೇಶಿಕ ಸಾರಿಗೆ ಕಚೇರಿಗಳು ಹಾಗೂ ಒಂದು[28] ಉಪ–ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಜೂನ್ ಮತ್ತು ಅಕ್ಟೋಬರ್ 2014ರ ನಡುವೆ ಮಾಡಲಾದ ದಾಖಲೆಗಳ ಪರೀಕ್ಷಾ–ಪರಿಶೀಲನೆಯ ವೇಳೆಯಲ್ಲಿ ವಿದ್ಯುತ್ ಚಾಲಿತ 45 ಮೋಟಾರು ಕಾರುಗಳು ಹಾಗೂ 25 ಮೋಟಾರು ಸೈಕಲ್ಲುಗಳ ಮೇಲೆ ನೋಂದಣಿಯ ದಿನಾಂಕದಿಂದ ಐದು ವರ್ಷಗಳು ಕಳೆದನಂತರವೂ ಜೀವಿತಾವಧಿ ತೆರಿಗೆ ಪಾವತಿಗಾಗಿ ತಗಾದೆಯನ್ನು ಸೃಷ್ಟಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಜೀವಿತಾವಧಿ ತೆರಿಗೆ ಪಾವತಿಗಾಗಿ ತಗಾದೆಯನ್ನು ಸೃಷ್ಟಿಸದಿದ್ದಂತಹ ಒಟ್ಟಾರೆ ಮೊತ್ತವು ₹ 5.73 ಲಕ್ಷ ಆಗಿದ್ದಿತು.

ಇದನ್ನು ಜುಲೈ ಮತ್ತು ಡಿಸೆಂಬರ್ 2014ರಲ್ಲಿ ಇಲಾಖೆಯ ಗಮನಕ್ಕೆ ತಂದನಂತರ ಹಾಗೂ ಜೂನ್ 2015ರಲ್ಲಿ ಸರ್ಕಾರಕ್ಕೆ ತಿಳಿಸಿದನಂತರ 35 ಪ್ರಕರಣಗಳಲ್ಲಿ ₹ 3.97 ಲಕ್ಷ ಮೊತ್ತವನ್ನು ವಸೂಲಾತಿ ಮಾಡಲಾಗಿದ್ದಿತು ಹಾಗೂ 30 ಪ್ರಕರಣಗಳಲ್ಲಿ ತಗಾದೆ ನೋಟೀಸುಗಳನ್ನು ನೀಡಲಾಗಿದ್ದಿತು. ಉಳಿದ ಐದು ಪ್ರಕರಣಗಳಿಗೆ ಸಂಬಂಧಿಸಿದಂತೆ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ನವಂಬರ್ 2015).

[26] ಬಾಗಲಕೋಟೆ, ಬಳ್ಳಾರಿ, ಜಮಖಂಡಿ, ಕೆ.ಜಿ.ಎಫ್, ಕೊಪ್ಪಳ, ಮಂಗಳೂರು ಹಾಗೂ ಪುತ್ತೂರು.

[27] ಬೆಂಗಳೂರು (ಕೇಂದ್ರ), ಬೆಂಗಳೂರು (ಪೂರ್ವ), ಬೆಂಗಳೂರು (ಉತ್ತರ), ಬೆಂಗಳೂರು (ದಕ್ಷಿಣ) ಹಾಗೂ ಕೆ.ಆರ್. ಪುರಂ

[28] ಹುಣಸೂರು